بِسْمِ اللهِ الرَّحْمٰنِ الرَّحِيْمِ     نَحْمَدُهٗ وَنُصَلِّي عَلٰى رَسُوْلِهِ الْكَرِيْمِ     وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 14

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**06 ಏಪ್ರೆಲ್ 2023, 06 ಶಹಾದತ್ 1402 ಹಿಜರಿ ಶಮ್ಸಿ,**
**14 ರಮಝ್ಹಾನ್ 1444 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

شَهْرُ رَمَضَانَ الَّذِيْٓ اُنْزِلَ فِيْهِ الْقُرْاٰنُ
هُدًى لِّلنَّاسِ وَبَيِّنٰتٍ مِّنَ الْهُدٰى وَالْفُرْقَانِ ۚ
فَمَنْ شَهِدَ مِنْكُمُ الشَّهْرَ فَلْيَصُمْهُ (البقرة:186)

**(ಆಲ್-ಬಖರ: 186)**

**ಅಂದರೆ: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝ್ಹಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ರಸೂಲುಲ್ಲಾಹ್(ಸ) ಅವರ ನೈತಿಕತೆ

**(26)** ಹಝ್ರತ್ ಸಅದ್ ಬಿನ್ ಹಿಶಾಮ್(ರ) ವರದಿ ಮಾಡುತ್ತಾರೆ ನಾವು ಆಯಿಷಾ(ರ) ಅವರ ಸಮ್ಮುಖ ಹಾಜರಾಗಿ ಕೇಳಿದೆವು: "ಓ ಉಮ್ಮುಲ್ ಮುಮಿನೀನ್! ನಮಗೆ ರಸೂಲುಲ್ಲಾಹ್(ಸ) ಅವರ ನಡವಳಿಕೆಯ ಬಗ್ಗೆ ಏನಾದರೂ ತಿಳಿಸಿ. ಅದಕ್ಕೆ ಹಝ್ರತ್ ಆಯಿಷಾ(ರ) ಹೇಳಿದರು, "ನೀವು ಪವಿತ್ರ ಖುರ್‌ಆನ್ ಓದುವುದಿಲ್ಲವೇ?" ಅದಕ್ಕೆ ನಾನು ಹೇಳಿದೆ ಏಕೆ ಓದುವುದಿಲ್ಲ, ಅವಶ್ಯಕವಾಗಿ ಓದುತ್ತೇನೆ. ತದನಂತರ ಹಝ್ರತ್ ಆಯಿಷಾ(ರ) ಹೇಳಿದರು ಅಲ್ಲಾಹನ ಪ್ರವಾದಿಯ ನೈತಿಕತೆಗಳು ಪವಿತ್ರ ಖುರ್‌ಆನ್‌ಗೆ ಅನುಗುಣವಾಗಿದ್ದವು. **(ಮುಸ್ಲಿಂ, ಕಿತಾಬ್ ಅಲ್-ಸಲಾತ್, ಅಧ್ಯಾಯ ಜಾಮಿ ಸಲಾತ್ ಅಲ್-ಲೈಲ್)**

### ಪವಿತ್ರ ಪ್ರವಾದಿ(ಸ) ಅವರನ್ನು ಉತ್ತಮ ನೈತಿಕತೆಯನ್ನು ಪೂರೈಸಲು ಕಳುಹಿಸಲಾಗಿದೆ

**(28)** ಹಝ್ರತ್ ಇಮಾಮ್ ಮಾಲಿಕ್ ಅವರು ಹೇಳಿದರು: ರಸೂಲುಲ್ಲಾಹ್(ಸ) ಅವರು ಹೇಳಿದರು, "ಉತ್ತಮ ನಡವಳಿಕೆಯನ್ನು ತೋರಿಸಲು ನನ್ನನ್ನು ಕಳುಹಿಸಲಾಗಿದೆ." ಅಂದರೆ, ಒಳ್ಳೆಯ ಮತ್ತು ಉನ್ನತ ನಡವಳಿಕೆಯನ್ನು ತೋರಿಸಲು ನನ್ನನ್ನು ಕಳುಹಿಸಲಾಗಿದೆ. **(ಮೌತಾ ಇಮಾಮ್ ಮಾಲಿಕ್, ಹಸನುಲ್ ಖಲ್ಕ್ ಅಧ್ಯಾಯ) (ಹದೀಖತುಸ್ಸಾಲಿಹೀನ್, ಲೇಖಕರು: ಮಾನ್ಯ ಮಲಿಕ್ ಸೈಫುರ್ ರಹಮಾನ್ ಸಾಹಿಬ್)**

## ರಸೂಲುಲ್ಲಾಹ್(ಸ) ರವರು ಅಲ್ಲಾಹನ ಗುಣಲಕ್ಷಣಗಳ ಅಭಿವ್ಯಕ್ತಿಯಾಗಿದ್ದಾರೆ ಸರ್ವಶಕ್ತನಾದ ಅಲ್ಲಾಹನು ರಸೂಲುಲ್ಲಾಹ್(ಸ) ರವರ ಮುಖಾಂತರ ಸೂರಾ ಅಲ್-ಫಾತಿಹಾದ ನಾಲ್ಕು ಗುಣ ಲಕ್ಷಣಗಳ ಮಾದರಿಯನ್ನು ತೋರಿಸಿದ್ದಾನೆ

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ದೈವಿಕ ಗುಣಲಕ್ಷಣಗಳ ಅಭಿವ್ಯಕ್ತಿಯಾಗಿದ್ದಾರೆ

ನಾನು ಸೂರಾ ಅಲ್-ಫಾತಿಹಾದ ನಾಲ್ಕು ಗುಣಲಕ್ಷಣಗಳ (ಇದನ್ನು ಉಮ್ಮುಲ್ ಕಿತಾಬ್ ಮತ್ತು ಅಲ್-ಮಸಾನಿ ಎಂದೂ ಕರೆಯುತ್ತಾರೆ ಮತ್ತು ಪವಿತ್ರ ಖುರ್‌ಆನ್‌ನ ಪ್ರತಿಬಿಂಬ ಹಾಗೂ ಸಾರಾಂಶವಾಗಿದೆ) ಉದಾಹರಣೆಗಳು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರಲ್ಲಿವೆ ಎಂದು ತೋರಿಸಲು ಬಯಸಿದೆ. ಅಂದರೆ ಆ ಗುಣಲಕ್ಷಣಗಳು ವಾದವಾಗಿತ್ತು ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ವ್ಯಕ್ತಿತ್ವವು ಪುರಾವೆ ಎಂದಾಗಿದೆ, ಹೀಗಾಗಿ ಪ್ರಭುತ್ವದ ಪುರಾವೆಯೂ ಅವರೊಂದಿಗೆ ನೀಡಲಾಯಿತು. ಅಂದರೆ ಅವರು ಮಕ್ಕಾದ ಕಾಡುಗಳಲ್ಲಿ ಸಂಚರಿಸಿದರು ಹೀಗೆ ಹತ್ತು ವರ್ಷಗಳ ಸಂಚರಿಸುವವನಿಗೆ ಯಾವುದೇ ಮಾರ್ಗ ತೋರುತ್ತಿರಲಿಲ್ಲ. ಇಸ್ಲಾಂ ಧರ್ಮವು ಭೂಮಿಯ ಮೇಲೆ ಹರಡುತ್ತದೆ ಮತ್ತು ಅದರ ಅನುಯಾಯಿಗಳು 90 ಕೋಟಿ ತಲುಪುತ್ತಾರೆ ಅವರ ತರಬೇತಿಯ ಬಗ್ಗೆ ಯಾರಿಗೆ ಯೋಚನೆ ಇತ್ತು? ಆದರೆ ಇವತ್ತು ಜಗತ್ತಿನಲ್ಲಿ ಮುಸ್ಲಿಮರು ಇಲ್ಲದ ಯಾವ ಜನವಸತಿ ಭಾಗವೂ ಇಲ್ಲ. ಮತ್ತೆ ಅರ್ರಹ್ಮಾನ್ ಗುಣಲಕ್ಷಣವನ್ನು ನೋಡಿ. ಕ್ರಿಯೆಯಿಲ್ಲದೆ ಯಶಸ್ಸು ಮತ್ತು ಅಗತ್ಯಗಳ ಸರಕುಗಳನ್ನು ತಲುಪಿಸುವುದು ಅದರ ಮೂಲ ಉದ್ದೇಶವಾಗಿದೆ. ಅವರ ಆಗಮನದ ಮುಂಚೆಯೇ ಅರ್ಹತೆಗಳನ್ನು ರಚಿಸುವುದು ಎಂತಹ ರಹ್ಮಾನಿಯತ್ (ಕಾರುಣೆ) ಆಗಿತ್ತು. ಉಮರ್(ರ) ಮಗುವಿನಂತೆ ಆಡುತ್ತಿದ್ದರು, ಅಬುಬಕರ್(ರ) ಅವಿಶ್ವಾಸಿಗಳ ಮನೆಯಲ್ಲಿ ಜನಿಸಿದರು ಹೀಗೆಯೇ ಅನೇಕ ಸಹಚರರು ಅವರೊಂದಿಗೆ ಬಂದು ಸೇರಿಕೊಂಡರು. ಅವರೆಲ್ಲರನ್ನು ಅವರಿಗಾಗಿ ದೇವರ ಕರುಣೆಯಿಂದ ಮೊದಲೇ ಸಿದ್ಧಪಡಿಸಿದಂತಿದೆ. ಮತ್ತು ರಹ್ಮಾನಿಯತ್‌ನ (ಕರುಣೆಯ) ಅನೇಕ ವಿಷಯಗಳು ಇಸ್ಲಾಮಿನಲ್ಲಿವೆ, ನಾವು ಅವುಗಳನ್ನು ವಿವರವಾಗಿ ವಿವರಿಸಲು ಸಹ ಸಾಧ್ಯವಿಲ್ಲ. ಉಮ್ಮತ್ (ರಹ್ಮಾನಿಯತ್) ಕರುಣೆಯನ್ನು ಬಯಸುತ್ತದೆ ಮತ್ತು ಅಲ್ಲಾಹನು ರಸೂಲುಲ್ಲಾಹ್(ಸ) ಅವರ ಬಗ್ಗೆ ಹೀಗೆ ಹೇಳಿದನು: **ಹುವಲ್ಲಝೀ ಬಅಸ ಫಿಲ್ ಉಮ್ಮೀಈನ ರಸೂಲನ್** (ಅಲ್‌ಜುಮುಅ: 03) ಕರುಣೆಯ ಮೂಲ ಉದ್ದೇಶವು ಈ ಉದಾಹರಣೆಯಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ: "ಕರ್‌ದೆ ಕರಾದೆ ಔರ್ ಉಠಾನೆವಾಲ ಸಾಥ್ ದೇ"

ಇದು ಇಸ್ಲಾಂ ಧರ್ಮದೊಂದಿಗೆ ಸಂಭವಿಸಿತು. ಇಸ್ಲಾಮ್ ಧರ್ಮವು ದೇವರ ಮಡಿಲಲ್ಲಿ ಮಗುವಿನಂತೆ ಇದೆ. ದೇವರು ಸ್ವತಃ ತಾನೇ ಅದರ ಎಲ್ಲಾ ಕಾರ್ಯಗಳನ್ನು ನೋಡಿಕೊಳ್ಳುತ್ತಾನೆ. ಅದರ ಎಲ್ಲಾ ಅಗತ್ಯಗಳನ್ನು ಪೂರೈಸುವವನು ಸ್ವತಃ ದೇವನೇ ಆಗಿದ್ದಾನೆ. ಯಾವುದೇ ಜೀವಿಗಳ ಒಲವಿನ ಹೊರೆ ಅವನ ಕೊರಳಲ್ಲಿರುವುದಿಲ್ಲ. ಅದೇ ರೀತಿ ಶ್ರಮ ವ್ಯರ್ಥ ಮಾಡದ ರಹೀಮ್. ಅದರ ವಿರುದ್ಧ ಶ್ರಮವಹಿಸುವುದು ಮತ್ತು ವಿಫಲಗೊಳ್ಳುವುದಾಗಿದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಕರುಣೆಯ ಅಭಿವ್ಯಕ್ತಿಯನ್ನು ನೋಡಿ. ಅದು ಹೇಗೆ ನಿಖರವಾಗಿ ಸಂಭವಿಸಿತು? ಅವರು ಗೆಲ್ಲದ ಯುದ್ಧವಿಲ್ಲ. ವಿಜಯಗಳು ಮಿಂಚಿನಂತೆ ಮಿನುಗುತ್ತವೆ. ಸೀರಿಯಾದ ವಿಜಯಗಳು, ಮಿಸರ್‌ನ ವಿಜಯಗಳನ್ನು ನೋಡಿ. ಇತಿಹಾಸದ ಪುಟಗಳಲ್ಲಿ ನಮ್ಮ ಪ್ರೀತಿಯ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಾಧಿಸಿದ ಸಾಧನೆಗಳಂತೆ ನಿಜವಾದ ಯಶಸ್ಸು ಸಾಧಿಸಿದ ವ್ಯಕ್ತಿ ಬೇರೆ ಯಾರೂ ಇಲ್ಲ. **(ಮಲ್‌ಫೂಝಾತ್, ಸಂಪುಟ-1, ಪುಟ-454, ಮುದ್ರಿತ ಖಾದಿಯಾನ್ 2018)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:**

ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್(ಸ) (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಸಹ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕಾದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ದೇವನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಹಿತಕಾಂಕ್ಷೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ದೇವನಿಗೆ ಅವರ ಹೃದಯದ ರಹಸ್ಯ ತಿಳಿದಿದ್ದುದರಿಂದ ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ (ಅವರ) ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು. *(ಹಖೀಖತುಲ್ ವಹ್ಯ್; ರೂಹಾನಿ ಖಝ್ಹಾಈನ್ ಸಂಪುಟ 22, ಪುಟ 118 – 119)*

# ಖುತ್‌ಬ ಜುಮುಅ

ಪವಿತ್ರ ಖುರ್‌ಆನ್‌ನ್ನು ಅನುಸರಿಸುವ ಮೂಲಕ ಮನುಷ್ಯನು ಸರ್ವಶಕ್ತನಾದ ಅಲ್ಲಾಹನ ಗುಣಗಳ ಅಭಿವ್ಯಕ್ತಿಯಾಗುತ್ತಾನೆ.

ಪವಿತ್ರ ಖುರ್‌ಆನ್ ಸ್ಥಾನ ಮತ್ತ ಪ್ರಾಮುಖ್ಯತೆ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ನಮಗೆ ತಿಳಿಸಿದ ಆಳವು ಸರ್ವಶಕ್ತ ಅಲ್ಲಾಹನ ಸಾಮೀಪ್ಯ ಗಳಿಸಲು ಮತ್ತು ಖುರ್‌ಆನ್ ಬೋಧನೆಗಳನ್ನು ಅನುಸರಿಸಲು ನಮಗೆ ಅದನ್ನು ನೀಡುತ್ತದೆ.

ನಾನು ಪ್ರಪಂಚದ ಎಲ್ಲಾ ಪ್ರವಾದಿಗಳನ್ನು ಆದರಿಸುತ್ತೇನೆ ಮತ್ತು ಅವರ ಗ್ರಂಥಗಳನ್ನು ಸಹ ಆದರಿಸುತ್ತೇನೆ. ಆದರೆ ಇಸ್ಲಾಮ್ ಧರ್ಮವನ್ನು ಮಾತ್ರ ಜೀವಂತ ಧರ್ಮ ಎಂದು ನಂಬುತ್ತೇನೆ. ಏಕೆಂದರೆ ಇದರ ಮೂಲಕವೇ ನನ್ನ ಮೇಲೆ ಅಲ್ಲಾಹನು ಬಹಿರಂಗಗೊಂಡನು. (ಹಝ್ರತ್ ಮಸೀಹ್ ಮೌಊದ್ (ಅ))

ನನ್ನ ಪ್ರಕಾರ ಜೀವಂತ ಧರ್ಮವೆಂದರೆ ಅದು ಜೀವಂತ ಮತ್ತು ಪ್ರಚಲಿತ ರೀತಿಯಲ್ಲಿ ತನ್ನ ಪವಾಡ ದೃಶ್ಯಗಳನ್ನು ತೋರಿಸುತ್ತಿರಬೇಕು. ಇಲ್ಲವಾದರೆ ಕೇವಲ ಜೀವಂತ ಧರ್ಮದ ವಾದ ಮತ್ತು ಪುರಾವೆಗಳು ನಿರರ್ಥಕವಾಗುತ್ತವೆ. (ಹಝ್ರತ್ ಮಸೀಹ್ ಮೌಊದ್ (ಅ))

ನಾವು ಪವಿತ್ರ ಖುರ್‌ಆನ್ ನಲ್ಲಿ ನಂಬಿಕೆಯಿಟ್ಟು ಯಾವುದೇ ಸುಧಾರಣೆಯಾಗದಿದ್ದರೆ ಅದು ನಮ್ಮ ತಪ್ಪು ಏಕೆಂದರೆ ಅವರ (ಅ) ಹೇಳಿದಂತೆ ಪರಿಪೂರ್ಣ ಅನುಸರಣೆ ಅಗತ್ಯ. ಪರಿಪೂರ್ಣ ರೀತಿಯಲ್ಲಿ ಅದರಂತೆ ನಡೆದುಕೊಳ್ಳದಿದ್ದರೆ ಸುಧಾರಣೆ ಹೇಗೆ ಸಾಧ್ಯ. ಆದುದರಿಂದ ನಮಗೆ ಪರಿಪೂರ್ಣ ರೀತಿಯಲ್ಲಿ ಅನುಸರಿಸುವ ಪ್ರಯತ್ನ ಮಾಡಬೇಕಾಗಿದೆ. ಅಲ್ಲಾಹನು ನಮಗೆ ಪರಿಪೂರ್ಣ ರೀತಿಯಲ್ಲಿ ಅನುಸರಿಸುವ ಭಾಗ್ಯ ದಯಪಾಲಿಸಲಿ.

ಆತ್ಮದ ಸಾಂತ್ವನ ಮತ್ತು ಅಭಿರುಚಿ ಮತ್ತು ಆತ್ಮದ ನಿಜವಾದ ಅಗತ್ಯಗಳು ಪೂರ್ಣಗೊಳಿಸುವ ಶಕ್ತಿ ಪವಿತ್ರ ಖುರ್‌ಆನ್‌ನಲ್ಲಿ ಮಾತ್ರಯಿದೆ. ಇಂದು ನಮ್ಮ ಅಹ್ಮದಿಯರ ಕರ್ತವ್ಯವಾಗಿದೆ. ತಮ್ಮೊಳಗೆ ಭಯಭಕ್ತಿ ಉಂಟು ಮಾಡಿಕೊಟ್ಟ ಈ ಬೋಧನೆಗಳ ಉತ್ತಮ ಗುಣಗಳನ್ನು ನಡೆ ಮತ್ತು ನುಡಿಗಳಿಂದ ಸಾಧಿಸಿ ತೋರಿಸಬೇಕು ನಡೆದು ತೋರಿಸಬೇಕು. ಎಲ್ಲ ರೀತಿಯ ರೋಗಗಳ ಚಿಕಿತ್ಸೆಯ ಪವಿತ್ರ ಖುರ್‌ಆನ್‌ನಲ್ಲಿಯೇ ಇದೆ. ಅದನ್ನು ಕಳುಹಿಸಿಕೊಟ್ಟವನು ಅಲ್ಲಾಹನಾಗಿದ್ದಾನೆ. ಪವಿತ್ರ ಖುರ್‌ಆನ್‌ನ್ನು ಉದ್ದೇಶಿತ ಸಾಮರ್ಥ್ಯದೊಂದಿಗೆ ಲೋಕದ ಸುಧಾರಣೆಗಾಗಿ ಕಳುಹಿಸಿದ್ದಾರೆ. ಅಲ್ಲಾಹನು ನಮಗೆ ತಖ್ವಾ ಭಯಭಕ್ತಿಯ ಮಾರ್ಗದಲ್ಲಿ ನಡೆಯುತ್ತ ಅದರಂತೆ ನಡೆಯುವ ಭಾಗ್ಯ ನೀಡುವಂತಾಗಲಿ.

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳ ಬೆಳಕಿನಲ್ಲಿ ಪವಿತ್ರ ಖುರ್‌ಆನ್‌ನ ಪ್ರಾಮುಖ್ಯತೆ, ವೈಶಿಷ್ಟತೆ, ನತ್ತು ಅದರ ಉತ್ತುಂಗ ಸ್ಥಾನದ ಕುರಿತು ಈಮಾನ್ ವರ್ಧಕ ಪ್ರಸ್ತಾವನೆ**

ವಿರೋಧದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬಾಂಗ್ಲಾದೇಶ, ಪಾಕಿಸ್ತಾನ ಬರ್ಕಿನ ಫಾಸೋ ಮತ್ತು ಅಲ್ಜೀರಿಯಾದಲ್ಲಿ ವಾಸಿಸುವ ಅಹ್ಮದಿಯರಿಗೆ ಪ್ರಾರ್ಥನೆಯ ಪ್ರೇರೇಪಿಸಿದರು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–03–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಮಗೆ ಪವಿತ್ರ ಖುರ್‌ಆನ್‌ನ ಅರಿವು ದಯಪಾಲಿಸಿದ್ದಾರೆ. ಅಥವಾ ತನ್ನ ಗ್ರಂಥಗಳ ಮತ್ತು ಅಧ್ಯಾಪನೆಗಳಲ್ಲಿ ಆ ಅರಿವನ್ನು ಅರಿಯಲು ಅಥವಾ ತನ್ನ ಗ್ರಂಥಗಳ ಮತ್ತು ಅಧ್ಯಾಪನೆಗಳಲ್ಲಿ ಆ ಅರಿವನ್ನು ಅರಿಯಲು ಮತ್ತು ಅದರಂತೆ ನಡೆದುಕೊಳ್ಳಲು ಯಾವ ರೀತಿ ಸಮಂಜಸವಾಗಿ ಪ್ರಸ್ತುತಪಡಿಸಿದ್ದಾರೆ. ಆ ಪೈಕಿ ನಾನು ಹಿಂದಿನ ಎರಡು ಜುಮುಅಗಳಲ್ಲಿ ಖುತುಬಗಳನ್ನು ನೀಡಿದ್ದೇವೆ.

ಪವಿತ್ರ ಖುರ್‌ಆನ್ ನಮಗೆ ನೀಡುವ ಅರಿವಿನ ಭಂಡಾರವೇ ಸತ್ಯದಲ್ಲಿ ದಾಸನನ್ನು ದೇವನೊಂದಿಗೆ ಸೇರಿಸುತ್ತದೆ. ಅದಲ್ಲದೇ ದೇವನನ್ನು ಗಳಿಸಲು ಬೇರೆ ಮಾರ್ಗವಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಮ್ಮ ಒಂದು ಕವಿತೆಯಲ್ಲಿ ಹೇಳುತ್ತಾರೆ.

"ಖುರ್‌ಆನ್ ಖುದಾ ನುಮಾ ಹೈ, ಖುದಾ ಕಾ ಕಲಾಂ ಹೈ,
ಬೇ ಇಸ್ ಕೆ ಮಅ್‌ರಿಫತ್ ಕಾ ಚಮನ್ ನಾತಮಾಮ್ ಹೈ."

ಅಂದರೆ: ಪವಿತ್ರ ಖುರ್‌ಆನ್ ದೇವನನ್ನು ತೋರಿಸಿ ಕೊಡುವಂಥದ್ದಾಗಿದೆ ಮತ್ತು ದೇವನ ವಚನವಾಗಿದೆ. ಅದಲ್ಲದೇ ಜ್ಞಾನದ ತೋಟವು ಅಪೂರ್ಣವಾಗಿದೆ. (ನುಸ್ರತುಲ್ ಹಖ್ಖ್, ಬರಾಹೀನೆ ಅಹ್ಮದಿಯಾ ಭಾಗ–5, ರೂಹಾನಿ ಖಝಾಇನ್, ಸಂಪುಟ–21, ಪುಟ–12)

ಇದು ನಾವು ಸದಾ ನಮ್ಮ ಮುಂದಿರಿಸಬೇಕಾದ ಅಂಶವಾಗಿದೆ. ನಾವು ಅಲ್ಲಾಹನ ಸಾಮೀಪ್ಯ ಮತ್ತು ಸಂಪ್ರೀತಿಯನ್ನು ಬಯಸುವುದಾದರೆ ತಮ್ಮ ಇಹಲೋಕ ಮತ್ತು ಪರಲೋಕವನ್ನು ನೆನಪಿನಲ್ಲಿಡಬೇಕು. ಪವಿತ್ರ ಖುರ್‌ಆನ್‌ನ ಜ್ಞಾನದಿಂದ ಪ್ರಯೋಜನ ಪಡೆಯಲಿಕ್ಕೂ ಅಲ್ಲಾಹನು ಕಳುಹಿಸಿದ ಸನ್ಮಾರ್ಗದರ್ಶಿ ಅವಶ್ಯಕತೆಯಿದೆ ಎಂಬ ಸಂಗತಿಯನ್ನು ಸಹ ಮುಂದಿರಿಸಬೇಕು ಈ ದಾಸರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಿರುವರು. ಪವಿತ್ರ ಖುರ್‌ಆನ್ ನ ವಿವಿಧ ಮಗ್ಗಲುಗಳ ಬಗ್ಗೆ ಅವರು ಆಳವಾಗಿ ಬೆಳಕು ಬೀರುವ ಬಗ್ಗೆ ಮತ್ತು ಅದರ ಸೌಂದರ್ಯದ ಕುರಿತು ತಿಳಿಸಿಕೊಟ್ಟಿದ್ದನ್ನು ಸಂಬಂಧಿಸಿ ಕಳೆದ ಎರಡು ಖುತುಬಗಳಲ್ಲಿ ನಾನು ಸ್ವಲ್ಪವಾಗಿ ಹೇಳಿದ್ದೆ. ಈ ಪರಂಪರೆ ಈಗ ಮುಂದುವರೆಯುತ್ತಿದೆ. ಇದರ ಕುರಿತು ಸಾಕಷ್ಟು ಸಂಗತಿಗಳನ್ನು ಹೇಳಲಿಕ್ಕಿದೆ. ಇಂದು ಕೂಡ ಈ ಪರಂಪರೆಯನ್ನು ಮುಂದುವರೆಸುತ್ತಾ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಉಪದೇಶಗಳ ಬೆಳಕಿನಲ್ಲಿ ಪವಿತ್ರ ಖುರ್‌ಆನ್‌ನ ವಿಶೇಷತೆ ಪದವಿ ಮತ್ತು ಪ್ರಾಮುಖ್ಯತೆಯು ಬಗ್ಗೆ ಪ್ರಸ್ತಾಪಿಸುತ್ತೇನೆ.

ಯಾವ ಆಳದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಮಗೆ ಪವಿತ್ರ ಖುರ್‌ಆನ್‌ನ ಪದವಿ ಮತ್ತು ಶ್ರೇಷ್ಠತೆಯಿಂದ ಅರಿವನ್ನು ಉಂಟು ಮಾಡಿದ್ದಾರೆ. ಅದೇ ನಮಗೆ ಅಲ್ಲಾಹನ ಸಾಮೀಪ್ಯ ಗಳಿಸಲು ಮತ್ತು ಖುರ್‌ಆನ್‌ನ ಮೇಲೆ ನಡೆದುಕೊಳ್ಳುವ ಅರಿವು ಒದಗಿಸುತ್ತದೆ.

ಅಂದಹಾಗೆ ಪೂರ್ಣಗಮನವಹಿಸಿ ನಮಗೆ ಈ ಮಾತುಗಳನ್ನು ಆಲಿಸುವ ಹಾಗೂ ಅರಿಯುವ ಪ್ರಯತ್ನ ಮಾಡಬೇಕಾಗಿದೆ, ಅದರಿಂದ ನಾವು ನಮ್ಮ ಜೀವನದ ಗುರಿಯನ್ನು ಮುಟ್ಟಬಹುದಾಗಿದೆ.

ಪವಿತ್ರ ಖುರ್‌ಆನ್ ದೇವವಚನವಾಗಿದೆ ಎಂಬುದನ್ನು ವಿವರಿಸುತ್ತಾ ಲಾಲ ಭೀಮಸೇನ್ ಅವರಿಗೆ ಬರೆದ ಪತ್ರದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸ್ವಲ್ಪ ದಿನಗಳ ಹಿಂದೆ ಲೇಖ್‌ರಾಮ್ ಎಂಬ ಹೆಸರಿನ ಆರ್ಯಧರ್ಮಿಯಾದ ಓರ್ವ ಬ್ರಾಹ್ಮಣ ಖಾದಿಯಾನ್‌ಗೆ ಬಂದು ನನ್ನನ್ನು ಭೇಟಿ ಮಾಡಿದ್ದರು. ವೇದವು ದೇವನ ವಚನವಾಗಿದೆ ಎಂದು

ಅವರು ಹೇಳಿದರು. ಪವಿತ್ರ ಖುರ್‌ಆನ್ ದೇವವಚನವೆಂದು ನನಗೆ ಗೊತ್ತಿದೆ. ಏಕೆಂದರೆ, ಅದರಲ್ಲಿ ಬಹುದೇವಾರಾಧನೆಯನ್ನು ಕಲಿಸಲಾಗಿಲ್ಲ ಅಥವಾ ಅದರಲ್ಲಿ ಅಪವಿತ್ರವಾದ ಬೇರೆ ಯಾವುದೇ ಅಧ್ಯಾಪನೆಯಿಲ್ಲ. ಅದನ್ನು ಅನುಸರಿಸುವುದರಿಂದ ಜೀವಂತ ದೇವನ ಮುಖ ಕಂಡುಬರುತ್ತದೆ ಮತ್ತು ದಿವ್ಯ ದೃಷ್ಟಾಂತಗಳು ಪ್ರಕಟವಾಗುತ್ತವೆ."(ಮಲ್ಫೂಝಾತ್ ಅಹ್ಮದ್, ಸಂಪುಟ-1, ಪುಟ-90)

ಒಟ್ಟಿನಲ್ಲಿ, ದೇವವಚನಕ್ಕೆ ಇರುವ ನಿಬಂಧನೆ ಏನೆಂದರೆ, ಅದರಲ್ಲಿ ಬಹುದೇವಾರಾಧನೆಯ ಬೋಧನೆ ಇರಬಾರದು ಮತ್ತು ಅದನ್ನು ಅನುಸುರಿಸುವುದರಿಂದ ದೇವನ ಮುಖ ಕಾಣುವಂತಾಗಬೇಕು.

ಪವಿತ್ರ ಖುರ್‌ಆನ್ ಹೀಗೆ ದೇವನ ಮುಖ ಕಾಣಲು ತಮ್ಮ ಪಾತ್ರ ವಹಿಸಿದೆ ಎಂಬುದನ್ನು ಸಹಾಬರ ಜೀವನದಿಂದ ಅರಿಯಬಹುದಾಗಿದೆ. ಸಹಾಬಿಯರ ಜೀವಿತಗಳಲ್ಲಿ ಪವಿತ್ರ ಖುರ್‌ಆನ್‌ನ ಪಾಠದ ಪ್ರಭಾವವನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಸ್ಲಾಮಿನ ಪ್ರಧಾನ ಸಮಯವಾದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಕಾಲಘಟ್ಟವನ್ನು ಆಳವಾಗಿ ನೋಡುವುದರಿಂದ ಹಝ್ರತ್ ಪೈಗಂಬರ್(ಸ) ರ ಬೋಧನೆಯು ಸತ್ಯವಿಶ್ವಾಸಿಗಳನ್ನು ಕೀಳು ಪದವಿಯಿಂದ ಉನ್ನತ ಪದವಿಗೆ ಹೇಗೆ ಮುಟ್ಟಿಸಿತ್ತು ಎಂದು ಸಾಬೀತಾಗುತ್ತದೆ. ಅಲ್ಲಾಹನು ಒಬ್ಬ ವ್ಯಕ್ತಿಯ ಮೂಲಕ ಅವರಿಗೆ ನೆರವು ನೀಡಿದನು. ಸಹಾಬಿಯರು ತಮ್ಮ ಕೊರತೆಗಳನ್ನು ಮತ್ತು ಪಾಪಗಳನ್ನು ಅರಿತುಕೊಂಡು ಅದರ ದುರ್ಗಂಧದಿಂದ ದೂರವಾದರು ಮಾತ್ರವಲ್ಲ. ಸತ್ಕರ್ಮಗಳ ಕಡೆಗೆ ಹೆಜ್ಜೆ ಹಾಕಿಕೊಂಡರು. ಅಲ್ಲಾಹನನ್ನು ಸಂಪ್ರೀತಿಗೊಳಿಸಲು ಅವರು ಮನುಷ್ಯನು ಊಹಿಸಲು ಸಾಧ್ಯವಲ್ಲದ ಕಠಿಣ ಪ್ರಯುತ್ನಗಳನ್ನು ಮಾಡಿಕೊಂಡರು. ಅವರು ಅಲ್ಲಾಹನ ಮಾರ್ಗದಲ್ಲಿ ತಮ್ಮ ಜೀವಗಳಿಗೆ ಹುಲ್ಲುಕಡ್ಡಿಗಳಷ್ಟು ಕೂಡ ಬೆಲೆ ಕೊಡಲಿಲ್ಲ. ಕೊನೆಗೆ ಅವರನ್ನು ಸ್ವೀಕರಿಸಲಾಯಿತು. ಮತ್ತು ಅಲ್ಲಾಹನು ಅವರ ಹೃದಯಗಳನ್ನು ಪಾಪಗಳಿಂದ ಸಂಪೂರ್ಣವಾಗಿ ದೂರವಿರಿಸಿದನು ಮತ್ತು ಸತ್ಕರ್ಮದೊಂದಿಗೆ ಪ್ರೀತಿಯನ್ನು ಹುಟ್ಟಿಸಿದನು." (ಚಶ್ಮ ಮಾಅ್‌ರಿಫತ್, ರೂಹಾನಿ ಖಝಾಇನ್, ಸಂಪುಟ-23, ಪುಟ-424, 425)

ಒಟ್ಟಿನಲ್ಲಿ ಇದಾಗಿದೆ ಅವರ ಮೇಲೆ ಪವಿತ್ರ ಖುರ್‌ಆನ್‌ನ ಪ್ರಭಾವ. ಅವರು ಭೂಮಿಯಿಂದ ಎದ್ದು ಆಕಾಶದ ಮಿನುಗುವ ನಕ್ಷತ್ರಗಳಾದರು. ಅವರಲ್ಲಿ ಪ್ರತಿಯೊಬ್ಬರು ನಿಮಗೆ ಸನ್ಮಾರ್ಗದರ್ಶಕರು ಎಂದು ಅವರ ಕುರಿತು ಹಝ್ರತ್ ಪೈಗಂಬರ್(ಸ) ಹೇಳಿದರು.
(ಅಲ್‌ಮಿಶ್ಕಾತ್ ಅಲ್ ಮಸಾಬೀಹ್, ಸಂಪುಟ-3, ಪುಟ-1696, ಕಿತಾಬುಲ್ ಮನಾಖಿಬ್, ಹದೀಸ್-6009, ಮಕ್ತಬ್ ಅಲ್‌ಇಸ್ಲಾಮಿ ಬೈರೂತ್ 1979)

ಪವಿತ್ರ ಖುರ್‌ಆನ್‌ನ ಅನುಸರಣೆಯಿಂದ ಮನುಷ್ಯನು ದೇವಗುಣಗಳ ಅಭಿವ್ಯಕ್ತಿಯಾಗುತ್ತಾರೆ.

ಈ ಮಾತನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾವ ವ್ಯಕ್ತಿ ಪವಿತ್ರ ಖುರ್‌ಆನ್‌ನ್ನು ನಂಬಿ ತನ್ನ ಪ್ರೀತಿ ಮತ್ತು ನಿಷ್ಠೆಯನ್ನು ಪರಾಕಾಷ್ಠತೆಗೆ ತಲುಪಿಸುತ್ತಾನೆ. ಅವರ ಪ್ರತಿಬಿಂಬ ರೂಪವಾಗಿ ಅಲ್ಲಾಹನ ಗುಣಗಳ ಅಭಿವ್ಯಕ್ತಿಯಾಗುತ್ತಾನೆ. ಕೇವಲ ಅನುಸರಣೆ ಶರತ್ತಲ್ಲ, ಬದಲಿಗೆ ಪ್ರೀತಿ ಹಾಗೂ ನಿಷ್ಠೆಯನ್ನು ಪರಾಕಾಷ್ಠತೆಗೆ ತಲುಪಿಸುವುದು ಶರತ್ತಾಗಿದೆ ಅಂದರೆ ಪರಿಪೂರ್ಣ ರೀತಿಯಲ್ಲಿ ಅದರ ನಿರ್ದೇಶನಗಳನ್ನು ಪಾಲಿಸಬೇಕು. ಆಗ ಅಲ್ಲಾಹನ ಗುಣಗಳ ಅಭಿವ್ಯಕ್ತಿಯಾಗುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೆ ಹೇಳುತ್ತಾರೆ: ಪವಿತ್ರ ಖುರ್‌ಆನ್‌ನ್ನು ಅನುಸರಿಸುತ್ತಿರುವುದರಿಂದ ಮನುಷ್ಯನು ಅತ್ಯುನ್ನತವಾದ ಅಲ್ಲಾಹನ ಗುಣಗಳನ್ನು ಪ್ರಕಟಿಸುತ್ತಾನೆ. ಇವೆಲ್ಲವು ನಾವು ಓದುತ್ತಿರುವ ಪವಿತ್ರ ಖುರ್‌ಆನ್‌ನ ವಚನದ ಬಲವಾದ ಶಕ್ತಿ ಮತ್ತು ವೈಶಿಷ್ಟ್ಯದ ಕಾರಣದಿಂದಾಗಿದೆ. ನಾನು ಪವಿತ್ರ ಖುರ್‌ಆನ್‌ನಲ್ಲಿ ಒಂದು ಬಲವಾದ ಶಕ್ತಿಯನ್ನು ಕಂಡಿದ್ದೇನೆ. ಹಝ್ರತ್ ಪೈಗಂಬರ್(ಸ) ರ ಅನುಸರಣೆಯಲ್ಲಿ ನಾನು ಒಂದು ವಿಸ್ಮಯಕರವಾದ ವಿಶೇಷತೆಯನ್ನು ಕಂಡಿದ್ದೇನೆ. ಅದೇನೆಂದರೆ ಸತ್ಯಸಂಧನಾಗಿ ಅನುಸರಿಸುವವನು ದೇವನ ಸ್ನೇಹಿತನೆಂಬ ಪದವಿಯನ್ನು ಗಳಿಸುತ್ತಾನೆ. ಅಂತಹ ಶಕ್ತಿ ಮತ್ತು ವಿಶೇಷತೆ ಯಾವ ಸಮುದಾಯ ಧರ್ಮ ಗ್ರಂಥಗಳಲ್ಲಿಯೂ ಇಲ್ಲ. ಬಹುಶಃ ಕಾಲಕ್ರಮೇಣ ಕಾಲಘಟ್ಟಗಳ ಪರಿಣಾಮವಾಗಿ ಬದಲಾವಣೆಗೆ ಒಳಗಾಗಿರಬಹುದು ಅಥವಾ ಅದರ ಪದಗಳ ಬದಲಾಗದಿದ್ದರೂ ಅದರ ಅರ್ಥ ಬಿಗಡಾಯಿಸಿರಬಹುದು. ಅಥವಾ ಅಲ್ಲಿಯ ಈ ರೀತಿಯು ಕಾಲಘಟ್ಟದಲ್ಲಿ ಭಿನ್ನತೆಯನ್ನು ದೂರಿಕರಿಸಿ ಇಡೀ ಲೋಕದಷ್ಟು ಜನರನ್ನು ಕೇವಲ ಒಂದೇ ಗ್ರಂಥದ ಮೇಲೆ ಕ್ರೋಢೀಕರಿಸಿದರು. ಆ ಹಿಂದಿನ ಎಲ್ಲಾ ಗ್ರಂಥಗಳನ್ನು ಈ ಅನುಗ್ರಹದಿಂದ ವಂಚಿತಗೊಳಿಸಿರಬಹುದು. ಇಲ್ಲದಿದ್ದರೆ ಯಾವ ಕಾರಣದಿಂದ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರ್(ಸ) ರವರ ನಿಜವಾದ ಅನುಸರಣೆಯಿಂದ ಮನಷ್ಯನು ಅವನ ಮಿಶ್ರಮಂಡಳಿಯಲ್ಲಿ ಸೇರುತ್ತಾನೆ. ಏಕೆ ಆ ಗ್ರಂಥಗಳಲ್ಲಿ ಈ ವಿಶೇಷತೆ ಇರುವುದಿಲ್ಲ. ಅದಕ್ಕಾಗಿಯೇ ಆ ಗ್ರಂಥಗಳನ್ನು ಅನುಸರಿಸುವರು. ಅದರ ಶ್ರೇಷ್ಠತೆಯನ್ನು ನಿರಾಕರಿಸುತ್ತಾರೆ ಮಾತ್ರವಲ್ಲ ಅವರು ಪವಾಡಗಳ ಮೇಲೆ ಮತ್ತು ದೃಷ್ಟಾಂತಗಳ ಮೇಲೆ ಪರಿಹಾಸ ಮಾಡುವರು. ಪವಾಡಗಳನ್ನು ನಂಬುವುದಿಲ್ಲ. ಅಷ್ಟೇ ಅಲ್ಲ ಅದನ್ನು ಪರಿಹಾಸ್ಯ ಮಾಡುತ್ತಾರೆ. ಅದೇ ಕಾರಣದಿಂದ ಅಲ್ಲಾಹನಿಂದ ದೂರವಾಗಿದ್ದಾರೆ. ಧರ್ಮದಿಂದ ದೂರವಾಗಿದ್ದಾರೆ ಮತ್ತು ನುಡಿದರು. ಆದರೆ ನಾವು ಅವರ ಮೇಲೆ ಯಾವುದೇ ರೀತಿಯಲ್ಲಿ ಅಪಹಾಸ್ಯ ಮಾಡುವುದಿಲ್ಲ. ಆದರೆ ಅವರ ವಂಚನೆಯ ಕಾರಣದಿಂದ ದುಃಖ ಅವಶ್ಯವಾಗುತ್ತದೆ.

ಒಟ್ಟಿನಲ್ಲಿ ತಮ್ಮ ಮಾತನ್ನು ಮುಂದುವರೆಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳುತ್ತಾರೆ:

ನಾನು ಇಲ್ಲಿ ಗತಿಸಿ ಹೋದ ಕಾಲದ ಕಥೆಗಳನ್ನು ಹೇಳಬಯಸುವುದಿಲ್ಲ. ಬದಲು ನಮಗೆ ತಿಳಿದಿರುವ ವೈಯಕ್ತಿಕ ಜ್ಞಾನವೇ ವಿವರಿಸುವೆನು. ನಾನು ಪವಿತ್ರ ಖುರ್‌ಆನ್‌ನಲ್ಲಿ ಒಂದು ಬಲವಾದ ಶಕ್ತಿಯನ್ನು ಕಂಡಿದ್ದೇನೆ. ಹಝ್ರತ್ ಪೈಗಂಬರ್ (ಸ) ರ ಅನುಸರಣೆಯಲ್ಲಿ ನಾನು ಒಂದು ವಿಸ್ಮಯಕರವಾದ ವಿಶೇಷತೆಯನ್ನು ಕಂಡಿದ್ದೇನೆ. ಅದೇನೆಂದರೆ ಸತ್ಯಸಂಧನಾಗಿ ಅನುಸರಿಸುವವನು ದೇವನ ಸ್ನೇಹಿತನೆಂಬ ಪದವಿಯನ್ನು ಗಳಿಸುತ್ತಾನೆ. ಈ ವಿಶೇಷತೆ ಯಾವ ಧರ್ಮದಲ್ಲಿಯೂ ಇಲ್ಲ. ಹಝ್ರತ್ ಪೈಗಂಬರ್(ಸ) ಅವರ ಸತ್ಯಸಂಧನಾದವನಿಗೆ ಅಲ್ಲಾಹನು ತನ್ನ ದಿವ್ಯವಾಣಿಯನ್ನು ಮಾತ್ರ ಅನುಗ್ರಹಿಸುವುದಿಲ್ಲ. ಬದಲಿಗೆ ತನ್ನ ಪ್ರತ್ಯಕ್ಷ ದರ್ಶನದಿಂದ ಸಾಬೀತುಪಡಿಸುತ್ತಾರೆ. ಭೂಮ್ಯಾಕಾಶಗಳ ಸೃಷ್ಟಿಸಿದ ಆ ಪ್ರಭು ನಾನೇ ಆಗಿದ್ದೇನೆ. ಆಗ ಒಬ್ಬರ ವಿಶ್ವಾಸ ಉನ್ನತಮಟ್ಟವನ್ನು ಸಾಧಿಸಿ ನಕ್ಷತ್ರಗಳ ಮುಂದೆಯೂ ಸಾಗುತ್ತದೆ. ಅಂದಹಾಗೆ ಸ್ವಯಂ ನಾನು ಇದರ ಅನುಭವಿಯಾಗಿದ್ದೇನೆ. ಅಲ್ಲಾಹನು ಎಲ್ಲೆಡೆ ವಾರ್ತಾಲಾಪ ಮಾಡುತ್ತಾನೆ. ಒಂದು ಲಕ್ಷಕ್ಕಿಂತ ಮಿಗಿಲಾದ ದೃಷ್ಟಾಂತಗಳು ಅಲ್ಲಾಹನು ತನ್ನ ಪರವಾಗಿ ತೋರಿಸುತ್ತಾನೆ. ನಾನು ಲೋಕದ ಎಲ್ಲ ಪ್ರವಾದಿಗಳನ್ನು ಆದರಿಸುತ್ತೇನೆ. ಮತ್ತು ಅವರ ಗ್ರಂಥಗಳಿಗೂ ಸಹ ಆದರಿಸುತ್ತೇನೆ. ಆದರೆ ಜೀವಂತ ಧರ್ಮ ಇಸ್ಲಾಂ ಧರ್ಮ ಮಾತ್ರ ಎಂಬುದು ನನ್ನ ನಂಬಿಕೆಯಾಗಿದೆ. ಏಕೆಂದರೆ ಈ ಮೂಲಕವೇ ನನ್ನ ಪ್ರಭು ನನ್ನ ಮೇಲೆ ಬಹಿರಂಗಗೊಂಡಿದ್ದಾನೆ.

ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿದರು: ಯಾವ ವ್ಯಕ್ತಿಗೆ ನನ್ನ ಈ ವಿವರಗಳ ಮೇಲೆ ಸಂಶಯವಿದೆ. ಅವನ ಸತ್ಯಶೋಧನೆಗೋಸ್ಕರ ಎರಡು ತಿಂಗಳುಗಳ ಅವಧಿ ನನ್ನ ಬಳಿ ಬಂದು ನೆಲೆಸಬಹುದು. ಈ ಅವಧಿಯವರೆಗೆ ಅವನ ಎಲ್ಲಾ ಖರ್ಚು ನಾನು ವಹಿಸಿಕೊಳ್ಳುವೆನು. ಮತ್ತು ಹೇಳಿದರು. ನನ್ನ ದೃಷ್ಟಿಯಲ್ಲಿ ಜೀವಂತ ಧರ್ಮವೆಂದರೆ, ಸಮಯ ಸಮಯಕ್ಕೆ ತನ್ನ ಜೀವಂತಿಕೆಯ ಪವಾಡಗಳನ್ನು ತೋರಿಸುತ್ತಿರಬೇಕು. ಇಲ್ಲವಾದರೆ ಕೇವಲ ವಾದದಿಂದ ಏನೂ ಪ್ರಯೋಜನವಿಲ್ಲ. (ಚಶ್ಮಮ ಮಅ್‌ರಿಫತ್, ರೂಹಾನಿ ಖಝಾಇನ್, ಸಂಪುಟ-23, ಪುಟ-427-428)

ಯಾರು ಅವರ ಈ ಆಹ್ವಾನದಿಂದ ಪ್ರಯೋಜನ ಪಡೆಯಬಯಸಿದ್ದರು. ಅವರು ಪ್ರಯೋಜನ ಪಡೆದರು ಮತ್ತು ಯಶಸ್ವಿಯಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಳಿ ಇದ್ದರು ಮತ್ತು ಸತ್ಯ ಸ್ವೀಕರಿಸಿದರು.

ಇಂದು ಸಹ ಅವರ ಜ್ಞಾನಪೂರ್ಣ ಕೃತಿಗಳು ಹಲವರನ್ನು ದೇವಪುರುಷರನ್ನಾಗಿ ಮಾಡುತ್ತಿದೆ. ಆದುದರಿಂದ ನಾವು ಸ್ವಯಂ ಅವರ ಈ ಕೃತಿಗಳಿಂದ ಲಾಭ ಪಡೆಯಬೇಕು. ಬದಲು ಇತರರಿಗೆ ಸಹ ತಿಳಿಸಬೇಕಾಗಿದೆ. ಆಗ ಮಾತ್ರ ನಮ್ಮ ಬೈಅತ್ತಿನ ಉದ್ದೇಶಪೂರ್ತಿಯಾಗುವಂತಾಗುತ್ತದೆ.

ಮತ್ತು ಪವಿತ್ರ ಖುರ್‌ಆನ್‌ನ ಗುಣಗಳನ್ನು ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಪವಿತ್ರ ಖುರ್‌ಆನ್‌ಗೆ ನಾಲ್ಕು ವಿಶಿಷ್ಠ ಗುಣಗಳಿವೆ. ಮೊದಲನೆಯದ್ದು ಪವಿತ್ರ ಖುರ್‌ಆನ್‌ನ ಭಾಷಾ ಶ್ರೇಷ್ಠತೆಯಾಗಿದೆ. ಅದು ಮನುಷ್ಯನ ವಾಕ್ಚಾತುರ್ಯದಿಂದ ಸಂಪೂರ್ಣವಾಗಿ ಭಿನ್ನವಾದುದಾಗಿದೆ. ಏಕೆಂದರೆ ಮನುಷ್ಯನ ವಾಕ್ಚಾತುರ್ಯದ ಕ್ಷೇತ್ರ ಬಹಳ ಸಂಕುಚಿತವಾಗಿರುತ್ತದೆ. ಅದರಲ್ಲಿ ಅಧಿಕ ಪ್ರಸಂಗಿತನ ಸುಳ್ಳು ಅಥವಾ ಅನವಶ್ಯಕ ಮಾತುಗಳು ಸೇರಿಸುವುದಿಲ್ಲ. ಅವನು ಯಶಸ್ವಿಯಾಗುವುದಿಲ್ಲ. ಅಲ್ಲಾಹನ ಗ್ರಂಥವು ಅದರಿಂದ ಮುಕ್ತವಾಗಿದೆ. ಯಾವ ಮಿಶ್ರಣವು ಇಲ್ಲ. ಎರಡನೆಯದ್ದು ಪವಿತ್ರ ಖುರ್‌ಆನ್‌ನಲ್ಲಿರುವ ಕಥೆಗಳೆಲ್ಲವೂ ಸತ್ಯದಲ್ಲಿ ಭವಿಷ್ಯವಾಣಿಗಳಾಗಿವೆ. ಇದು ಸಹ ನಾವು ಪವಿತ್ರ ಖುರ್‌ಆನ್‌ನಲ್ಲಿ ಕಾಣಬಹುದು. "ಮೂರನೆಯ ವಿಶಿಷ್ಠ

ಗುಣವೇನೆಂದರೆ, ಪವಿತ್ರ ಖುರ್‌ಆನ್‌ನ ಅಧ್ಯಾಪನೆಯು ಮನುಷ್ಯನ ಸ್ವಭಾವ ಪ್ರಕೃತವನ್ನು ಅದರ ಪರಿಪೂರ್ಣತೆಗೆ ತಲುಪಿಸಲು ಸಂಪೂರ್ಣವಾದ ಸಂಗತಿಗಳನ್ನು ಹೊಂದಿಕೊಂಡಿದೆ. ನಾಲ್ಕನೆಯ ಮುಖ್ಯವಾದ ವಿಶಿಷ್ಟ ಗುಣವೇನೆಂದರೆ, ಪರಿಪೂರ್ಣವಾಗಿ ಅನುಸರಿಸುವವರನ್ನು ಅದು ಅಲ್ಲಾಹನಿಗೆ ಎಷ್ಟು ಸಮೀಪಗೊಳಿಸುತ್ತದೆ ಎಂದರೆ, ಅನುಸರಿಸುವವನು ಅಲ್ಲಾಹನೊಡನೆ ಸಂಭಾಷಣೆ ನಡೆಸುವ ಸೌಭಾಗ್ಯವನ್ನು ಪಡೆಯುತ್ತಾನೆ. ಮತ್ತು ಸ್ಪಷ್ಟವಾದ ದೃಷ್ಟಾಂತಗಳು ಆತನಿಂದ ಪ್ರಕಟವಾಗುತ್ತವೆ. ಪವಿತ್ರ ಖುರ್‌ಆನ್ ಎಂಥ ಗ್ರಂಥವೆಂದರೆ, ಅದನ್ನು ಅನುಸರಿಸುವುದರಿಂದ ಪ್ರಾರ್ಥನೆಗಳು ಸ್ವೀಕಾರಗೊಳ್ಳುತ್ತವೆ. ಪವಿತ್ರ ಖುರ್‌ಆನ್‌ನ ಈ ಗುಣ ಅತ್ಯಂತ ಅನುಸರಿಸಲು ಯೋಗ್ಯವಾಗಿದೆ, ಸತ್ಯವಿಶ್ವಾಸಿಯ ಮೇಲೆ ಅವತರಿಸುವ ಎಲ್ಲಾ ಅನುಗ್ರಹಗಳು ಅಲ್ಲಾಹನ ಒಂದು ಕಾರ್ಯವಾಗಿರುತ್ತದೆ. ಅದನ್ನು ಯಾರೂ ಸಹ ತನ್ನ ವೈಯಕ್ತಿಕ ಗುಣ ಎಂದು ಸಾರಲು ಸಾಧ್ಯವಿಲ್ಲ. ಸತ್ಯವಿಶ್ವಾಸಿಯ ಗುಣವೆಂದರೆ, ಭಯಭಕ್ತಿ, ಪಾವಿತ್ರ್ಯತೆ ಮತ್ತು ಆಧ್ಯಾತ್ಮಿಕ ಶಕ್ತಿ ಹಾಗೂ ದೃಢ ಚಿತ್ತತೆಯಾಗಿದೆ. ಉದಾಹರಣೆಗೆ ಒಂದು ಗೋಡೆಯ ಮೇಲೆ ಸೂರ್ಯನ ಬೆಳಕು ಬಿದ್ದರೆ ಅದನ್ನು ಗೋಡೆಯ ಗುಣ ಎನ್ನಲಾಗದು. ಏಕೆಂದರೆ ಅದು ಅದರಿಂದ ದೂರವು ಆಗಬಹುದು. ಗೋಡೆಯ ಗುಣವೆಂದರೆ, ಅದರ ಬುನಾದಿ ಒಂದು ಭದ್ರವಾದ ಕಲ್ಲಿನ ಮೇಲೆ ಇರಬೇಕು. ಅದು ಎಷ್ಟರಮಟ್ಟಿಗೆ ಗಟ್ಟಿಯಾಗಿರಬೇಕೆಂದರೆ, ಪ್ರವಾಹ ಬಂದರೂ ಕೊಚ್ಚಿ ಹೋಗಬಾರದು. (ಚಶ್ಮ ಮಅ್‌ರಿಫತ್, ರೂಹಾನಿ ಖಝಾಈನ್, ನಂಪುಟ-23, ಪುಟ-268)

ಅಂದಹಾಗೆ ವಿಶ್ವಾಸದ ಸ್ಥಿತಿ ಹೀಗಿರಬೇಕು. ಪವಿತ್ರ ಖುರ್‌ಆನ್‌ನ್ನು ಅಲ್ಲಾಹನ ಪವಿತ್ರ ಗ್ರಂಥ ಎಂದು ಭಾವಿಸಿ ಅದರ ಮೇಲೆ ನಡೆದುಕೊಳ್ಳಬೇಕು. ಅದುವೇ ನಮ್ಮ ವಿಶ್ವಾಸವನ್ನು ದೃಢಪಡಿಸುತ್ತದೆ. ನಮಗೆ ಅಲ್ಲಾಹನ ಸಾನಿಧ್ಯ ದೊರಕಿಸಿಕೊಡುತ್ತದೆ. ಯಾವ ಬಿರುಗಾಳಿ ಯಾವ ಪ್ರವಾಹವು ವಿರೋಧಿಗಳ ವಿರೋಧವು ಮನುಷ್ಯನಿಗೆ ಅವನ ವಿಶ್ವಾಸದಿಂದ ಅಲುಗಾಡಿಲು ಸಾಧ್ಯವಾಗುವುದಿಲ್ಲ. ಇದಾಗಿರಬೇಕು. ಮನುಷ್ಯನ ಗುಣ, ಸದಾ ಸಾಧ್ಯವಾಗುವುದಿಲ್ಲ. ಇದಾಗಿರಬೇಕು ಮನುಷ್ಯನ ಗುಣ, ಸದಾ ಅವನ ಮೇಲೆ ಅಲ್ಲಾಹನ ಗ್ರಂಥದ ಪ್ರಕಾಶ ಬೀಳುತ್ತಿರಬೇಕು ಮತ್ತು ಅವನ ಮೇಲೆ ಅಲ್ಲಾಹನ ಗ್ರಂಥದ ಪ್ರಕಾಶ ಬೀಳುತ್ತಿರಬೇಕು. ಮತ್ತು ಅದನ್ನು ಅರಿಯುವ ಪ್ರಯತ್ನ ಮಾಡಬೇಕು.

ಮತ್ತೆ ನುಡಿದರು. ಪವಿತ್ರ ಖುರ್‌ಆನ್‌ನ ಅದ್ಭುತದಿಂದ ಪ್ರಭಾವಗಳಲ್ಲಿ ಒಂದೇನೆಂದರೆ, ಅದನ್ನು ಪರಿಪೂರ್ಣವಾಗಿ ಅನುಸರಿಸುವವನು ಸ್ವೀಕೃತಿಯ ಪದವಿಯನ್ನು ಪಡೆಯುತ್ತಾನೆ ಮತ್ತು ಆತನ ದುಆಗಳು ಸ್ವೀಕಾರಗೊಂಡ ನಂತರ ಅಲ್ಲಾಹನು ತನ್ನ ಸವಿಯಾದ ಮಾತು ಮತ್ತು ಪ್ರತಾಪದ ಮೂಲಕ ದುಆ ಸ್ವೀಕಾರಗೊಂಡಿದ್ದರ ಬಗ್ಗೆ ತಿಳಿಸಿಯೂ ಕೊಡುತ್ತಾನೆ. ಹಾಗೂ ವಿಶೇಷವಾಗಿ ವಿರೋಧಿಗಳಿಗೆ ಎದುರಾಗಿ ಅಂಥವರಿಗೆ ನೆರವು ಸಹ ನೀಡುತ್ತಾನೆ. (ಚಶ್ಮಯಮ ಮಅ್‌ರಿಫತ್, ರೂಹಾನಿ ಖಝಾಈನ್, ಸಂಪುಟ-23, ಪುಟ-271 ಅಡಿಟಿಪ್ಪಣಿ)

ಪವಿತ್ರ ಖುರ್‌ಆನ್‌ನಲ್ಲಿ ಎಲ್ಲಾ ರೀತಿಯ ಮಾರ್ಗದರ್ಶನಗಳಿವೆ ಎಂಬ ಮಾತನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅರಬ್ ಬಹುದೇವಾರಾಧಕರ ಹಾಗೆ. ಆ ದೇಶದ ಗ್ರಂಥದವರು ಸಹ ಅಪರಾಧಿಗಳಾಗಿದ್ದರು. ಕ್ರೈಸ್ತರಂತೂ ಪಾಪ ಪರಿಹಾರ ಸಮಸ್ಯೆಗೆ ಮಹತ್ವ ನೀಡಿ ಅದರ ಮೇಲೆ ಭರವಸೆ ಹೊಂದಿ ಎಲ್ಲಾ ಅಪರಾದಗಳು ನಮಗೆ ಧರ್ಮಬದ್ಧವಾಗಿವೆ ಎಂದು ಭಾವಿಸಿಕೊಂಡಿದ್ದರು. ಯಹೂದಿ ಹೇಳುತ್ತಿದ್ದರು. ನಾವು ಅಪರಾದ ಏನಾದರೂ ಮಾಡಿದರೂ ಸ್ವಲ್ಪ ದಿನಗಳು ಮಾತ್ರ ನರಕಯಾತನೆ ಅನುಭವಿಸುವರು ಅದಕ್ಕಿಂತ ಹೆಚ್ಚೇನಿಲ್ಲ. ಈ ಕುರಿತು ಅಲ್ಲಾಹನು ಹೇಳಿದನು. **ಝಾಲಿಕ ಬಿಅನ್ನಹುಮ್ ಖಾಲೂ ಲನ್ ತಮಸ್ಸನ ನ್ನಾರು ಇಲ್ಲಾ ಅಯ್ಯಾಮ ಮ್ಮಾದೂದಾತಿವ್ವ ಗರ್ರಹುಮ್ ಫೀ ದೀನಿಹಿಮ್ ಮಾ ಕಾನೂ ಯಫ್ತರೂನ್** (ಆಲಿ-ಇಮ್ರಾನ್: 25) ..........ಅವರಿಗೆ ಈ ಧೈರ್ಯ ಹೇಗೆ ಬಂತು? ಈ ವಚನ ನಾನು ಓದಿದ್ದು ಕಾರಣ, ಯಹೂದಿಯರ ಈ ಹೇಳಿಕೆ ನಮಗೆ ನರಕದ ಅಗ್ನಿ ತಾಗಿದರೂ ಕೇವಲ ಕೆಲ ದಿನಗಳವರೆಗೆ ಮಾತ್ರ ಇರುವುದು ಎಂಬ ಅವರ ಟೊಳ್ಳು ನಂಬಿಕೆ ಅವರಲ್ಲಿ ಗರ್ವ ಉಂಟು ಮಾಡಿದೆ. ಅಂದಹಾಗೆ ಗ್ರಂಥದವರು ಮತ್ತು ಅರಬರ ಬಹುದೇವರಾಧಕರು ಅತ್ಯಂತ ದುಷ್ಕರ್ಮಿಗಳಾಗಿದ್ದರು. ದುಷ್ಕರ್ಮ ಎಸಗಿಯೂ ನಾವು ಸತ್ಕರ್ಮ ಮಾಡಿದೆವು ಎಂದು ಭಾವಿಸುತ್ತಿದ್ದರು. ಮತ್ತು ಅಪರಾಧಗಳಿಂದ ದೂರವಿರುತ್ತಿರಲಿಲ್ಲ. ಸಮಾಜದಲ್ಲಿ ಶಾಂತಿಭಂಗವನ್ನುಂಟು ಮಾಡುತ್ತಿದ್ದರು. ಆಗ ಅಲ್ಲಾಹನು ತನ್ನ ನಬಿಯ ಕೈಯಲ್ಲಿ ಪ್ರಭುತ್ವ ಕೊಟ್ಟು ಅವರ ಕೈಯಿಂದ ಬಡವರನ್ನು ರಕ್ಷಿಸಬಯಸಿದನು. ಅರಬ್ ದೇಶವು ಸರ್ವಾಧಿಕಾರತ್ವ ಹೊಂದಿತ್ತು. ಜನರು ಯಾವ ಅರಸನ ಹಿಡಿತದಲ್ಲಿ ಇರಬಯಸುತ್ತಿರಲಿಲ್ಲ. ಆದುದರಿಂದ ಪ್ರತಿಯೊಂದು ಪಂಥವು ಅತ್ಯಂತ ಬೇಜವಾಬ್ದಾರಿಯಿಂದ ಮತ್ತು ಉದ್ಧಟತನದಿಂದ ಜೀವನ ಕಳೆಯುತ್ತಿದ್ದರು. ಅವರಿಗೆ ಶಿಕ್ಷೆಯ ಯಾವ ಕಾನೂನು ಇರಲಿಲ್ಲ. ಆದುದರಿಂದ ಜನರು ದಿನೇ ದಿನೇ ಅಪರಾಧದಲ್ಲಿ ಮುಂದುವರೆಯುತ್ತಿದ್ದರು. ಅಂತೂ ಅಲ್ಲಾಹನು ಆ ದೇಶದ ಮೇಲೆ ಕರುಣೆದೋರಿ ಹಝ್ರತ್ ಪೈಗಂಬರ್(ಸ) ಅವರನ್ನು ಈ ದೇಶಕ್ಕಾಗಿ ಕೇವಲ ಪ್ರವಾದಿಯಾಗಿ ಕಳುಹಿಸಲಿಲ್ಲ. ಬದಲು ಆ ದೇಶದ ಅರಸನು ಮಾಡಿದನು. ಪವಿತ್ರ ಖುರ್‌ಆನ್‌ನ್ನು ಒಂದು ಎಂತಹ ಕಾನೂನಿನಂತೆ ಪರಿಪೂರ್ಣಗೊಳಿಸಿದ್ದನೆಂದರೆ ಅದರಲ್ಲಿ ಸಿವಿಲ್, ಕ್ರಿಮಿನಲ್, ಹಣಕಾಸು ಎಲ್ಲಾ ನಿರ್ದೇಶನಗಳಿವೆ. ಆದುದರಿಂದ ಹಝ್ರತ್ ಪೈಗಂಬರ್(ಸ) ರವರು ಒಬ್ಬ ರಾಜರಂತೆ ಎಲ್ಲಾ ಪಂಥಗಳ ಮೇಲೆ ಪ್ರಭುತ್ವ ಹೊಂದಿದ್ದರು. ಹೀಗೆ ಎಲ್ಲಾ ಧರ್ಮದ ಜನರು ತಮ್ಮ ಅಹವಾಲುಗಳನ್ನು ಹಿಡಿದುಕೊಂಡು ಬಂದು ಅವರಿಂದ ತೀರ್ಪು ಪಡೆಯುತ್ತಿದ್ದರು. ಪವಿತ್ರ ಖುರ್‌ಆನ್‌ನಿಂದ ಸಾಬೀತಾಗಿದೆ ಒಂದು ಸಂದರ್ಭದಲ್ಲಿ ಓರ್ವ ಮುಸಲ್ಮಾನನು ಮತ್ತು ಓರ್ವ ಯಹೂದಿ ಹುಝೂರರ ನ್ಯಾಯಾಲಯದ ಮೊಕದ್ದೊಮ್ಮೆ ತಂದು ನಿಂತರು. ಆಗ ಹುಝೂರ್(ಸ) ಸಂಶೋಧನೆಯ ನಂತರ ಯಹೂದಿಯನ್ನು ಸತ್ಯವಂತ ಎಂದರು ಮತ್ತು ಮುಸಲ್ಮಾನನಿಗೆ ತಪ್ಪಿತಸ್ಥನೆಂದು ತೀರ್ಪು ಕೊಟ್ಟರು. ಕೆಲ ಮೂರ್ಖರು, ಪವಿತ್ರ ಖುರ್‌ಆನ್ ಗಮನಕೊಟ್ಟು ಓದದವರು ಪ್ರತಿಯೊಂದಕ್ಕೂ ಹಝ್ರತ್ ಪೈಗಂಬರ್ (ಸ) ರವರ ಪ್ರವಾದಿತ್ವಕ್ಕೆ ಸೇರಿಸುತ್ತಾರೆ. ಅದಾಗ್ಯೂ ಅಂತಹ ಶಿಕ್ಷೆಗಳು ಖಿಲಾಫತ್ ಅಂದರೆ ರಾಜರ ನೆಲೆಯಲ್ಲಿ ಆಗಿದ್ದವು. (ಚಸ್ಮ ಮಅ್‌ರಿಫ಼ತ್, ರೂಹಾನಿ ಖಝಾಈನ್, ಸಂಪುಟ-23, ಪುಟ-242-243)

ಪವಿತ್ರ ಖುರ್‌ಆನಿನ ಮೂಲಕ ಪವಿತ್ರ ಜೀವನ ಸಾಗಿಸುವ ವಿಷಯ ಕುರಿತು ವಿವರಿಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳುತ್ತಾರೆ: ಇದಂತೂ ಸ್ಪಷ್ಟವಿದೆ. ಯಾವ ವಸ್ತು ಯಾವ ಕಾರಣಕ್ಕಾಗಿ ಉಪಯೋಗಿಸಲ್ಪಡುತ್ತದೆ. ಅದರಲ್ಲಿ ಯಶಸ್ಸು ಗಳಿಸಿದರೆ ಮಾತ್ರ ಅದರ ಗುಣ ಸಾಧಿಸಿದಂತಾಗುತ್ತದೆ. ಉದಾಹರಣೆಗೆ ಒಂದು ಎತ್ತನ್ನು ಕೃಷಿಗೋಸ್ಕರ ಖರೀದಿಸಲಾಗಿದೆ ಎಂದರೆ, ಅದು ಕೃಷಿ ಕಾರ್ಯಕ್ಕೆ ಯೋಗ್ಯವಾಗಿದೆಯೇ ಇಲ್ಲವೋ ಎಂಬುದೇ ನೋಡಲಾಗುತ್ತದೆ. ಎತ್ತು ನಗ ಎಳೆಯಲು ತೆಗೆದುಕೊಂಡರೆ, ಅದನ್ನು ನಗ ಎಳೆಯಲೆಂದೆ ಉಪಯೋಗಿಸಲಾಗುತ್ತದೆ. ಸರಿಯಾಗಿ ನಗ ಎಳೆಯುವ ಎತ್ತನ್ನೇ ಒಳ್ಳೆಯ ಎತ್ತು ಎನ್ನಲಾಗುವುದು." ಅದೇ ರೀತಿ ಸ್ಪಷ್ಟವಿದೆ. ಒಂದು ದೈವಿಕ ಗ್ರಂಥದ ಉದ್ದೇಶ, ಅದು ತನ್ನ ಅನುಯಾಯಿಗಳಿಗೆ ತನ್ನ ಶಿಕ್ಷಣ ಮತ್ತು ಪ್ರಭಾವ ಹಾಗೂ ಸುಧಾರಣಾ ಶಕ್ತಿ ಮತ್ತು ಆಧ್ಯಾತ್ಮಿಕ ವೈಶಿಷ್ಠತೆಯಿಂದ ಮನುಷ್ಯನನ್ನು ಪ್ರತಿಯೊಂದು ಪಾಪ ಮತ್ತು ದುರ್ಗಧಿತ ಜೀವನದಿಂದ ಮುಕ್ತಿ ನೀಡಿ ಒಂದು ಪವಿತ್ರ ಜೀವನ ನೀಡುತ್ತದೆಯೇ ನೋಡಲಾಗುವುದು. ಪವಿತ್ರ ಜೀವನ ಸಾಗುತ್ತಾ ದೇವನ ಸಾಮೀಪ್ಯ ಗುರುತಿಸುವಂತಾಗಬೇಕು. ದೇವನು ಅದ್ವಿತಿಯನು, ಎಲ್ಲಾ ಸಂತೋಷಗಳ ಉಗಮಸ್ಥಾನವಾಗಿದ್ದು ಪ್ರೀತಿ ಸಂಬಂಧವೇ ಮುಕ್ತಿಯ ಬೇರಾಗಿದೆ. ಅದೇ ಆ ಸ್ವರ್ಗವಾಗಿದೆ. ಅದರಲ್ಲಿ ಪ್ರವೇಶ ಪಡೆದನಂತರ ಎಲ್ಲಾ ಕಷ್ಟ ಮತ್ತು ಕಹಿ ಮತ್ತು ಅದರಲ್ಲಿ ಪ್ರವೇಶ ಪಡೆದ ನಂತರ ಎಲ್ಲಾ ಕಷ್ಟ ಮತ್ತು ಕಹಿ ಮತ್ತು ದುಃಖ, ಶಿಕ್ಷೆ ದೂರವಾಗುತ್ತದೆ. ನಿಸ್ಸಂಶಯವಾಗಿ ಜೀವಂತ ಮತ್ತು ಪರಿಪೂರ್ಣ ದೈವಿಕ ಗ್ರಂಥ ಅದೇ ಆಗಿದೆ. ಅದು ದೇವನನ್ನು ಬಯಸುವವನಿಗೆ ಅವನ ಉದ್ದೇಶ ಸಾಧಿಸಿಕೊಡಬೇಕು. ಅವನಿಗೆ ನಿಕೃಷ್ಟ ಜೀವನದಿಂದ ಮುಕ್ತಿ ನೀಡಬೇಕು. ಅವನಿಗೆ ಆ ದೇವನೊಂದಿಗೆ ಸಂಬಂಧ ಕಲ್ಪಿಸಬೇಕು. ಅವನ ಸಾಮೀಪ್ಯವೇ ಮುಕ್ತಿಯಾಗಿದೆ. ಎಲ್ಲ ಸಂಶಯ ಅನುಮಾನಗಳನ್ನು ದೂರ ಮಾಡಿ. ಒಂದು ಪರಿಪೂರ್ಣ ಅರಿವು ಉಂಟಾಗಬೇಕು. ಅಂದರೆ ಅವನು ದೇವನನ್ನು ಕಾಣುವಂತಾಗಬೇಕು. ಅವನು ದೇವನೊಂದಿಗೆ ಎಂತಹ ಸಂಬಂಧ ಹೊಂದಬೇಕೆಂದರೆ ಅವನು ಕ್ಷಮಿಸಲ್ಪಟ್ಟು ದೇವನ ನಿಷ್ಠಾವಂತ ದಾಸನಾಗಬೇಕು. ದೇವನ ಕೃಪೆ ಯಾವ ಮಟ್ಟದಲ್ಲಿರಬೇಕೆಂದರೆ, ಅವನು ಎಲ್ಲ ರೀತಿಯಲ್ಲೂ ಸಹಕರಿಸಿ ಅವನಲ್ಲಿ ಮತ್ತು ಅವನ ಇತರ ಸಂಬಂಧಿಕರಲ್ಲಿ ವ್ಯತ್ಯಾಸ ಎದ್ದು ಕಾಣುವಂತಾಗಬೇಕು. ದೇವನ ಜ್ಞಾನದ ಬಾಗಿಲುಗಳು ಅವನ ಮೇಲೆ ತೆರೆಯುವಂತಾಗಬೇಕು. ಒಂದು ದೈವಿಕ ಗ್ರಂಥ ಇವೆಲ್ಲಾ ಕರ್ತವ್ಯ ಪೂರೈಸಿಕೊಡದಿದ್ದರೆ, ಇದು ಅದರ ನಿಜವದ ಕರ್ತವ್ಯವಾಗಿದೆ. ಇತರ ಅಸಂಬಂಧ ವಾದಗಳಿಂದ ಮೀರಿ ತನ್ನ ಗುಣಗಳನ್ನು ಸಾಬೀತುಪಡಿಸಬೇಕು. ಇಲ್ಲದಿದ್ದರೆ ಅದರ ಉದಾಹರಣೆ ಹೀಗೆ ಆದೀತು. ಒಬ್ಬ ವ್ಯಕ್ತಿ ವೈದ್ಯನಾಗುವ ವಾದ ಹೊಂದುವನು, ಅವನು ಮುಂದೆ ಒಬ್ಬ ರೋಗಿಯು ಬಂದು ರೋಗ ದೂರ ಮಾಡಲು ಹೇಳಿದರೆ, ಅವನು ಹೀಗೆ ಉತ್ತರ ನೀಡಿದರೆ. ನಾನು ಈ ರೋಗವನ್ನು ಗುಣಪಡಿಸಬಲ್ಲೆ. ಆದರೆ ನನಗೆ ಕುಸ್ತಿ ಆಡಲು ಚೆನ್ನಾಗಿ ಬರುತ್ತದೆ. ಅಥವಾ ಹೀಗೆ ಹೇಳಿದರೆ, ನನಗೆ ಫಿಲಾಸಫಿ ಚೆನ್ನಾಗಿ ಗೊತ್ತು. ಸ್ಪಷ್ಟವಿದೆ ಹೀಗೆ ಹೇಳುವವನಿಗೆ ಒಬ್ಬ ಜೋಕರ್ ಎಂದು ಹೇಳಬೇಕಾಗುತ್ತದೆ.

ವಿವೇಕವಂತರ ದೃಷ್ಟಿಯಲ್ಲಿ ಅವನು ಶಿಕ್ಷೆಗೆ ಅರ್ಹನಾಗುವನು. ದೇವನ ಗ್ರಂಥ ಮತ್ತು ದೇವನ ಪ್ರವಾದಿ ಲೋಕದಲ್ಲಿ ಆಗಮಿಸುವ ನಿಜವಾದ ಉದ್ದೇಶವೆಂದರೆ, ಲೋಕವನ್ನು ಪಾಪದ ಜೀವನದಿಂದ ಮುಕ್ತಿ ನೀಡಿ ದೇವನೊಂದಿಗೆ ಪವಿತ್ರ ಸಂಬಂಧ ಸ್ಥಾಪಿಸುವಂತಾಗಬೇಕು. ಅವರ ಉದ್ದೇಶ ಐಹಿಕ ವಿದ್ಯೆ ಅಥವಾ ಆವಿಷ್ಕಾರವನ್ನು ಕಲಿಸುವುದು ಆಗಿರುವುದಿಲ್ಲ.

ಅಂದಹಾಗೆ ವಿವೇಕವಂತನೊಬ್ಬನಿಗೆ ಮತ್ತು ನಾಯವಂತನೊಬ್ಬನಿಗೆ ಈ ಮಾತನ್ನು ಅರ್ಥ ಮಾಡಿಕೊಳ್ಳಲು ಏನು ಕಷ್ಟವಲ್ಲ, ದೈವಿಕ ಗ್ರಂಥದ ಉದ್ದೇಶ ದೇವನೊಡನೆ ಸಂಬಂಧ ಕಲ್ಪಿಸುವುದು ಮತ್ತು ದೇವನ ಅಸ್ತಿತ್ವದ ಕುರಿತು ಬಲವಾದ ನಂಬಿಕೆ ಉಂಟು ಮಾಡುವುದಾಗಿರುತ್ತದೆ. ದೇವನ ಪ್ರತಾಪ ಮತ್ತು ಅವನ ಹೃದಯದಲ್ಲಿ ಉಂಟುಮಾಡಿ ಪಾಪಗಳಾಗದಂತೆ ತಡೆಯಬೇಕು. ಇಲ್ಲದಿದ್ದರೆ ಅಂತಹ ಗ್ರಂಥ ಪಡೆದು ನಾವೇನು ಮಾಡಬೇಕು, ಅದು ಹೃದಯದಿಂದ ಪಾಪಗಳನ್ನು ದೂರ ಮಾಡುವುದಿಲ್ಲ. ಪವಿತ್ರ ಹಾಗೂ ದೇವಜ್ಞಾನವು ನೀಡುವುದಿಲ್ಲ. ನೆನಪಿರಲಿ, ಪಾಪಗಳ ಹವ್ಯಾಸದ ರೋಗ ಕುಷ್ಟರೋಗಕ್ಕಿಂತಲೂ ಭಯಾನಕ ರೋಗವಾಗಿದೆ. ಜೀವಂತ ದೇವಜ್ಞಾನ ಅವನ ಪ್ರಕಾಶ ಮತ್ತು ಅವನ ಭಯ ಹಾಗೂ ಪ್ರತಾಪ ಮತ್ತು ಶಕ್ತಿಯ ದೃಷ್ಟಾಂತಗಳ ಮಳೆಯ ರೀತಿ ಅವತರಿಸುವುದಿಲ್ಲ. ಎಲ್ಲಿಯ ತನಕ ಮನುಷ್ಯನು ಅವನ ಸೂಕ್ಷ್ಮ ಶಕ್ತಿಗಳನ್ನು ಸಮೀಪದಿಂದ ಕಾಣುವುದಿಲ್ಲ. ಉದಾಹರಣೆಗೆ ಮೇಕೆಯು ಹುಲಿಯನ್ನು ಎರಡು ಹೆಜ್ಜೆ ದೂರದಲ್ಲಿ ನೋಡುತ್ತದೆ. ಮನುಷ್ಯನಿಗೆ ನಾಶಗೊಳಿಸುವ ಪಾಪಗಳಿಂದ ರಕ್ಷಣೆ ಪಡೆಯುವ ಅಗತ್ಯವಿದೆ. ಅದಕ್ಕಾಗಿ ದೇವನ ಭಯ ಅವನ ಹೃದಯದಲ್ಲಿ ಸ್ಥಾಪಿತವಾಗಬೇಕು. ಅದರಿಂದ ಅವನು ಸಹಜವಾಗಿ ಆತ್ಮೀಯ ಪ್ರಲೋಭನೆಗಳಿಗೆ ವಿದ್ಯುತ್ ರೂಪದಲ್ಲಿ ಬಿದ್ದು ನಾಶಗೊಳಿಸುತ್ತದೆ. ಆದರೆ ಆ ಅಪವಿತ್ರ ಭಾವನೆಗಳು ಅದು ಮೂರ್ಛೆ ರೋಗದಂತೆ ಮತ್ತೆ ಮತ್ತೆ ಆವರಿಸುತ್ತದೆ. ಕೇವಲ ಸ್ವಯಂ ಭೂ ಪರಮೇಶ್ವರನಿಂದ ದೂರವಾಗಲು ಸಾಧ್ಯವೆ, ಅಥವಾ ಪಾಪ ಪರಿಹಾರದ ಸಮಸ್ಯೆಯಿಂದ ಸಾಧ್ಯವೇ, ಅದರಿಂದ ದುಃಖವು ಆತ್ಮಕ್ಕೆ ತಟ್ಟಲೂ ಇಲ್ಲ? ಖಂಡಿತ ಇಲ್ಲ, ಇದು ಸಾಧಾರಣ ಮಾತಲ್ಲ, ಬದಲು ಎಲ್ಲದ್ದಕ್ಕಿಂತ ಹೆಚ್ಚು ವಿವೇಕವಂತರ ದೃಷ್ಟಿಯಲ್ಲಿ ಯೋಚಿಸಲು ಯೋಗ್ಯವಾಗಿದೆ. ಅಂತಹ ಅಸಂಬಂಧ ಹಾಗೂ ಬೇಜವಾಬ್ದಾರಿಯಿಂದ ಉಂಟಾಗುವ ಪಾಪಗಳು ಹೇಗೆ ತಾನೇ ದೂರವಾಗಲು ಸಾಧ್ಯ. ನಿಜವಾದ ಸಂತೋಷ ಕೇವಲ ಕಪೋಲಕಲ್ಪಿತ ಸಂತೊಷಕ್ಕೆ ಸಮಾನ ಆಗಲಾರದು. ಸಂತೋಷಗಳಲ್ಲಿ ಎರಡು ರೀತಿ ಇವೆ. ಕೆಲವು ನಿಜವಾದ ಸಂತೋಷಗಳು, ಅದನ್ನು ಗುಮಾನಿಯಿಂದ ಬಿಡಲು ಸಾಧ್ಯವಾಗುವುದಿಲ್ಲ, ಅವನು ಹೇಳಬಹುದು, ಇದು ನಮಗೆ ಇನ್‌ಶಾಅಲ್ಲಾಹ್ ದೊರಕಬಹುದು. ಮತ್ತೆ ಸಿಗಬಹುದು, ಯಾವಾಗ ಸಿಗುವುದು? ಅದನ್ನು ಬಿಡಲು ಸಾಧ್ಯವಿಲ್ಲ. ಹೌದು ಒಂದು ದೃಢವಿಶ್ವಾಸದಿಂದ, ದುರ್ಬಲ ವಿಶ್ವಾಸವನ್ನು ತಳ್ಳಿ ಹಾಕಬಹುದು. ಉದಾಹರಣೆಗೆ ಒಂದು ಕಾಡುಯಿದೆ. ಅಲ್ಲಿ ಹಲವು ಜಿಂಕೆಗಳನ್ನು ನಾವು ಸುಲಭವಾಗಿ ಹಿಡಿಯಬಹುದು, ಇದನ್ನು ಊಹಿಸಿ ಅದನ್ನು ಪಡೆಯಲು ಹೆಜ್ಜೆ ಮುಂದೆ ಹಾಕುತ್ತೇವೆ. ಆದರೆ ಇನ್ನೊಂದು ವಿಶ್ವಾಸ ಅಲ್ಲಿ ಐವತ್ತು ಹುಲಿ ಸಿಂಹಗಳು ಸಹ ಇವೆ ಮತ್ತು ಸಾವಿರಾರು ವಿಷಕಾರಿಕ ಹಾವುಗಳಿವೆ, ಅವು ಬಾಯಿ ತೆರೆದು ನಿಂತಿವೆ ಎಂದು ವಿಶ್ವಾಸ ಆದಾಗ ಆ ಮೊದಲಿನ ಇರಾದೆಯನ್ನು ಬಿಟ್ಟುಬಿಡುತ್ತೇವೆ. ಅದೇ ರೀತಿ ಪರಿಪೂರ್ಣ ದೃಢವಿಶ್ವಾಸವಿಲ್ಲದೇ ಪಾಪಗಳಿಂದ ದೂರವಾಗಲು ಸಾಧ್ಯವಿಲ್ಲ. ಪಾಪಗಳಿಂದ ದೂರವಾಗುವ ವಿಧಾನವೆಂದರೆ, ಈ ದೃಢವದ ವಿಶ್ವಾಸ ಹೊಂದಬೇಕು. ನಾವು ಪಾಪಗಳನ್ನು ಎಸಗಿದರೆ ನಮಗೆ ಸತ್ಕಾಲವಾಗಿ ಸುಖ ಸಿಗಬಹುದು. ಆದರೆ ಅದು ಒಂದು ಕಾಡಿಗೆ ಬೇಟೆಗೆ ಹೋಗುತ್ತೇವೆ. ಅಲ್ಲಿ ಹುಲಿ ಸಿಂಹಗಳಿವೆ. ವಿಷಜಂತುಗಳಿವೆ. ಅದರ ಭಯದಿಂದ ಅಲ್ಲಿ ಬೇಟೆ ಆಡಲು ಆಗುವುದಿಲ್ಲ. ಅದೇ ರೀತಿ ಪಾಪಗಳಿಂದ ರಕ್ಷಿಸಿಕೊಳ್ಳಬೇಕಾದರೆ ಅಲ್ಲಾಹನ ಭಯ ಅವಶ್ಯವಾಗಿದೆ, ಅವನ ಶಿಕ್ಷೆ ಘೋರವಾಗಿದೆ ಎಂಬ ಬಲವಾದ ವಿಶ್ವಾಸ ಅಗತ್ಯ. ನಾವು ಪಾಪ ಮಾಡಿದರೆ ಅವನ ಹಿಡಿತಕ್ಕೆ ಒಳಗಾಗುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೆ ಹೇಳಿದರು: ಕಬ್ಬಿಣ, ಕಬ್ಬಿಣವನ್ನು ಮುರಿಯುತ್ತದೆ. ಅಸಡ್ಡೆಯ ಮರೆಗಳನ್ನು ನುಚ್ಚುನೂರು ಮಾಡುವಂತಹ, ದೇಹವಲ್ಲ, ಒಂದು ನಡುಕ ಉಂಟು ಮಾಡುವಂತಹ ಮರಣವನ್ನು ಸಮೀಪಗೊಳಿಸಿ ತೋರಿಸುವಂತಹ ಸದೃಢವಾದ ವಿಶ್ವಾಸವು ದೇವನ ಶ್ರೇಷ್ಠತೆ ಮತ್ತು ಗಾಂಭೀರ್ಯದ ಕುರಿತು ಇರಬೇಕು. ಪಾಪದ ಕಡೆಗೆ ಪ್ರೇರಣೆ ನೀಡುವ ಆತ್ಮದ ಎಲ್ಲ ನರಗಳನ್ನು ತುಂಡಾಗುವಂತಹ ದೇವಭಯ ಹೃದಯದಲ್ಲಿ ಇರಬೇಕು ಮತ್ತು ಮನುಷ್ಯನು ಅದೃಶ್ಯವಾದ ಒಂದು ಕೈಯಿಂದ ಅಲ್ಲಾಹನ ಕಡೆಗೆ ಸೆಳೆಯಲ್ಪಡುವಂತೆ ಆಗಬೇಕು. ನಿರ್ಭೀತ ಅಪರಾಧಿಯನ್ನು ಶಿಕ್ಷಿಸಲು ಬಿಡದ ದೇವನೊಬ್ಬನು ನಿಜವಾಗಿಯೂ ಇದ್ದಾನೆ ಎಂಬ ದೃಢವಿಶ್ವಾಸ ಆತನ ಹೃದಯದಲ್ಲಿ ತುಂಬಿರಬೇಕು. ಈ ಅವಶ್ಯಕತೆಗಳನ್ನು ಪೂರೈಸುವ ಗ್ರಂಥ ಪವಿತ್ರ ಖುರ್‌ಆನ್ ಆಗಿದೆ ಎಂದು ನಾನು ಪ್ರತಿಯೊಬ್ಬರಿಗೂ ತಿಳಿಸುತ್ತೇನೆ. ಪವಿತ್ರ ಖುರ್‌ಆನ್‌ನ್ನು ಅನುಸರಿಸುವ ಮನುಷ್ಯನ ಮುಂದೆ ಅಲ್ಲಾಹನು ಸ್ವತಃ ಪ್ರಕಟಗೊಳ್ಳುತ್ತಾರೆ. ಮತ್ತು ಅಲ್ಲಾಹನು ಸರ್ವಲೋಕವನ್ನು ಆತನಿಗೆ ತನ್ನ ಅಸ್ತಿತ್ವದ ಬಗ್ಗೆ ತಿಳಿಸಿಕೊಳ್ಳುತ್ತಾನೆ.

ಇದಾಗಿದೆ ಪವಿತ್ರ ಖುರ್‌ಆನ್‌ನ ಆಶಯ ಅದರ ಬಗ್ಗೆ ಪ್ರತಿಯೊಬ್ಬರೂ ತಿಳಿದಿರಬೇಕು. ನಾನು ಪಡೆದಂತಹ ಬೋಧನೆ ನಡತೆಯ ಮೂಲಕ ತೋರಿಸಿಕೊಡಬೇಕಾಗಿದೆ. ಇಲ್ಲದಿದ್ದರೆ ಇತರ ಧರ್ಮಗಳಂತೆಯೇ ನಮ್ಮ ನಂಬಿಕೆಯ ದಾವೆಯು ಕೇವಲ ದಾವೆಯಾಗಿ ಉಳಿಯುವುದು. ಇದೀಗ ಇಲ್ಲಿ ಈ ಗ್ರಂಥ ಸುಧಾರಣೆ ಮಾಡುತ್ತದೆ. ಬೇರೆ ಗ್ರಂಥಗಳು ಇಲ್ಲ. ಏಕೆಂದರೆ ಅದರಲ್ಲಿ ಪರಿಪೂರ್ಣ ಶಿಕ್ಷಣವಿಲ್ಲ. ನಾವು ಪವಿತ್ರ ಖುರ್‌ಆನ್ ನಂಬುವುದಾರೆ ಮತ್ತು ಸುಧಾರಣೆ ಆಗಲಿಲ್ಲ ಎಂದಾದರೆ ಅದರಲ್ಲಿ ನಮ್ಮ ದೋಷವಿದೆ, ಏಕೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳಿದಂತೆ ಪರಿಪೂರ್ಣ ಅನುಸರಣೆ ಅವಶ್ಯವಾಗಿದೆ. ಪರಿಪೂರ್ಣ ಅನುಸರಣೆ ಮಾಡದಿದ್ದರೆ ಹೇಗೆ ಸುಧಾರಣೆಯಾಗಲು ಸಾಧ್ಯ. ಆದುದರಿಂದ ನಮಗೆ ಪರಿಪೂರ್ಣ ಅನುಸರಣೆ ಮಾಡುವುದು ಅವಶ್ಯವಾಗಿದೆ. ಅಲ್ಲಾಹನು ಆ ಭಾಗ್ಯ ನಮಗೆ ದಯಪಾಲಿಸಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ನಮ್ಮ ಮತ್ತು ನಮಗಿಂತ ಪೂರ್ವ ಜನರ ಅನುಭವವಿದೆ. ಪವಿತ್ರ ಖುರ್‌ಆನ್ ತನ್ನ ಆಧ್ಯಾತ್ಮಿಕ ಪ್ರಭಾವಗಳಿಂದ ಮತ್ತು ತನ್ನ ಸ್ವಂತ ಪ್ರಕಾಶದಿಂದ ತನ್ನೆಡೆ ಸೆಳೆಯುತ್ತದೆ. ಮತ್ತು ಅವನ ಹೃದಯವನ್ನು ಪ್ರಕಾಶಿತನನ್ನಾಗಿ ಮಾಡುತ್ತದೆ ಮತ್ತು ದೊಡ್ಡ ದೊಡ್ಡ ದೃಷ್ಟಾಂತಗಳನ್ನು ತೋರಿಸಿ ದೇವನೊಂದಿಗೆ ಎಂತಹ ದೃಢ ಸಂಬಂಧ ಜೋಡಿಸುತ್ತದೆ ಎಂದರೆ ಅದು ಖಡ್ಗದಿಂದಲು ಮುರಿಯಲು ಸಾಧ್ಯವಾಗುವುದಿಲ್ಲ. ಅದು ಹೃದಯದ ಕಣ್ಣನ್ನು ತೆರೆಸುತ್ತದೆ ಮತ್ತು ಪಾಪದ ದುರ್ಗಂಧದ ಸರೋವರನ್ನು ಮುಚ್ಚುತ್ತದೆ. ಅಲ್ಲಾಹನೊಡನೆ ಸವಿಯಾದ ಸಂಭಾಷಣೆಯ ರುಚಿ ದಯಪಾಲಿಸುತ್ತದೆ. ಅದೃಶ್ಯ ಜ್ಞಾನವನ್ನು ನೀಡುತ್ತದೆ. ದುಆ ಸ್ವೀಕೃತವಾದದ್ದು ತನ್ನ ಮಾತಿನಿಂದ ಅವಗತಗೊಳಿಸುತ್ತಾನೆ. ಮತ್ತು ಯಾರು ಅವನೊಡನೆ ಎದುರಾಗುವನೋ ಅಂದರೆ ಪವಿತ್ರ ಖುರ್‌ಆನ್‌ನ ನಿಜವಾದ ಅನುಸರಿಸುವವನ ಜೊತೆ, ಅಲ್ಲಾಹನು ಒಂದು ಭಯಾನಕ ದೃಷ್ಟಾಂತ ಮೂಲಕ ಪ್ರಕಟವಾಗಿ ಅವನೊಂದಿಗಿರುವ ಸಂಬಂಧ ದೃಢಪಡಿಸುತ್ತಾನೆ. (ಚಶ್ಮ ಮಅ್‌ರಿಫತ್, ರೂಹಾನಿ ಖಝಾಇನ್, ಸಂಪುಟ–23, ಪುಟ 305–309)

ಅಂತೂ ನಿಜವಾದ ಅನುಯಾಯಿಯಾಗುವುದು ಅವಶ್ಯವಾಗಿದೆ. ಮತ್ತು ಈ ಮಾತನ್ನು ವಿವರಿಸುತ್ತಾ ಹೇಳುತ್ತಾರೆ: ಪವಿತ್ರ ಖುರ್‌ಆನ್ ಶಿರ್ಕ್‌ನಿಂದ ಮುಕ್ತಿ ಪಡೆಯಲು ಇರುವ ಮಾರ್ಗವಾಗಿದೆ. ಅರಬ್ ದೇಶಗಳಲ್ಲಿ, ಇರಾನ್, ಈಜಿಪ್ಟ್, ಸಿರಿಯಾ, ಭಾರತ, ಚೀನಾ, ಆಫ್ಘಾನಿಸ್ತಾನ್, ಕಾಶ್ಮೀರ, ಮುಂತಾದ ದೇಶಗಳಲ್ಲಿ ಏಕದೇವ ವಿಶ್ವಾಸದ ಬೀಜವನ್ನು ಪವಿತ್ರ ಖುರ್‌ಆನ್ ಬಿತ್ತಿದ್ದು ಮತ್ತು ಹೆಚ್ಚಿನ ದೇಶಗಳಿಂದ ಬಹುದೇವಾರಾಧನೆ ಮತ್ತು ಸೃಷ್ಟಿ ಪೂಜೆಯ ಬೀಜವನ್ನು ಬೇರು ಸಹಿತ ಕಿತ್ತು ಹಾಕಿದ್ದು ಎಂತಹ ಕಾರ್ಯವಾಗಿದೆ ಎಂದರೆ, ಅದಕ್ಕೆ ಸಮಾನವಾದ ಕೆಲಸ ಯಾವುದೆ ಕಾಲದಲ್ಲಿ ಕಾಣಲು ಸಿಗುವುದಿಲ್ಲ. (ಚಶ್ಮ ಮಅ್‌ರಿಫತ್, ರೂಹಾನಿ ಖಝಾಇನ್, ನಂಪುಟ–23, ಪುಟ–77)

ಪ್ರಾರಂಭದಲ್ಲಿ ಇಸ್ಲಾಂ ಹರಡಿದ ದೇಶಗಳಲ್ಲಿ ಶಿರ್ಕ್ ಅಂತ್ಯಗೊಂದಿದೆ. ಅದಕ್ಕೆ ಕಾರಣ ಪವಿತ್ರ ಖುರ್‌ಆನ್‌ನ ಬೋಧನೆಯಂತೆ ನಡೆದ ಕಾರಣವಾಗಿದೆ. ಅದೇ ಕಾರಣದಿಂದ ನಮ್ಮ ಪೂರ್ವಜರು ಇಸ್ಲಾಂ ಸ್ವೀಕರಿಸಿದರು. ಆದರೆ ಇಂದು ನಾವು ಅದರಂತೆ ನಡೆದುಕೊಳ್ಳುತ್ತಿಲ್ಲ. ಮತ್ತೆ ಅದೇ ಅಜ್ಞಾನದ ಕಡೆಗೆ ಮರಳುತ್ತಿದ್ದೇವೆ.

ಪವಿತ್ರ ಖುರ್‌ಆನ್ ಅಧ್ಯಾಪನೆ ಅತ್ಯುನ್ನತವಾದ ಅಧ್ಯಾಪನೆಯಾಗಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಯಾವ ಗ್ರಂಥ ಲೋಕಸೃಷ್ಟಿಯ ಕಾಲದಿಂದ ಬಂದಿದೆ ಎಂದಾದರೆ ಅದು ಪರಿಪೂರ್ಣ ಗ್ರಂಥವಾಗಲು ಸಾಧ್ಯವಿಲ್ಲ ಎಂದು ಬುದ್ಧಿ ನಂಬುತ್ತದೆ. ಪ್ರಾರಂಭದಲ್ಲಿ ಬಂದ ಗ್ರಂಥಗಳು ಪರಿಪೂರ್ಣವಾಗಿದ್ದವು ಎಂಬುದು ನಂಬಲು ಸಾಧ್ಯವಿಲ್ಲ. ಬದಲಿಗೆ ಅದು ಪ್ರಾರಂಭಿಕ ಅಕ್ಷರ ಕಲಿಸುವಂತಹ ಸ್ಥಿತಿ ಅವರದ್ದಾದದ್ದು. ಮಕ್ಕಳಿಗೆ ಅ, ಆ, ಇ, ಈ ಅಕ್ಷರ ಕಲಿಸಿದಂತೆ, ಸ್ಪಷ್ಟವಿದೆ. ಇಂತಹ ಪ್ರಾರಂಭಿಕ ಗ್ರಂಥದಲ್ಲಿ ಹೆಚ್ಚು ಅರ್ಹತೆಯ ಅವಶ್ಯಕತೆ ಇರುವುದಿಲ್ಲ. ಪ್ರಾಥಮಿಕ ಹಂತದಲ್ಲಿ ಎ,ಬಿ,ಸಿ ಕಲಿಸಲಾಗುತ್ತದೆ. ಅಲಿಫ್, ಬೆ, ಜೀಮ್ ಅದಕ್ಕೆ ಹೆಚ್ಚು ಅರ್ಹತೆಯ ಅವಶ್ಯಕತೆ ಇರುವುದಿಲ್ಲ. ಹೌದು ಯಾವ ಕಾಲದಲ್ಲಿ ಮನುಷ್ಯನ ಆವಿಷ್ಕಾರಗಳಲ್ಲಿ ಮುಂದುವರೆಯಿತು. ಮಾನವ ಕುಲ ಕೆಲವು ತಪ್ಪುಗಳು ಮಾಡತೊಡಗಿತು. ಆಗ ಸೂಕ್ಷ್ಮ ಅತಿಸೂಕ್ಷ್ಮ

ಶಿಕ್ಷಣ ಅಗತ್ಯವಾಯಿತು. ವಿಶೇಷವಾಗಿ ಅಜ್ಞಾನದ ಕತ್ತಲಿನಲ್ಲಿ ಲೋಕವು ಮುಳುಗಿದಾಗ ಮಾನವ ಜೀವಿಗೆ ಹಲವು ರೀತಿಯ ಶಿಕ್ಷಣ ಮತ್ತು ದುಷ್ಕರ್ಮಗಳಲ್ಲಿ ತೊಡಗಿದಾಗ ಒಂದು ಉನ್ನತ ಹಾಗೂ ಪರಿಪೂರ್ಣ ಶಿಕ್ಷಣದ ಅವಶ್ಯಕತೆ ಬೇಕಾಯಿತು. ಅದು ಪವಿತ್ರ ಖುರ್‌ಆನ್ ಆಗಿದೆ. ಆದರೆ ಪ್ರಾರಂಭ ಕಾಲದಲ್ಲಿ ಲೋಕಕ್ಕೆ ಉನ್ನತ ದರ್ಜೆಯ ಶಿಕ್ಷಣದ ಅವಶ್ಯಕತೆ ಇರಲಿಲ್ಲ. ಏನೆಂದರೆ ಇನ್ನು ಮಾನವ ಜೀವಿ ಪ್ರಗತಿ ಹೊಂದಿರಲಿಲ್ಲ. ಇನ್ನು ಅವರಲ್ಲಿ ಜ್ಞಾನ ಅಜ್ಞಾನದಲ್ಲಿ ಮುಳುಗಿದ ಈ ಲೋಕಕ್ಕೆ ಉನ್ನತ ದರ್ಜೆ ಬೋಧನೆ ನೀಡುವ ಒಂದು ಗ್ರಂಥದ ಅವಶ್ಯಕತೆ ಬೇಕಾಗಿತ್ತು. ಅಂಧಕಾರದಲ್ಲಿ ಮುಳಗಿದ ಜನರ ಸುಧಾರಣೆಗಾಗಿ ಈ ಗ್ರಂಥದ ಅವಶ್ಯಕತೆ ಇತ್ತು." (ಚಶ್ಮ ಮಅ್‌ರಿಫತ್, ರೂಹಾನಿ ಖಝಾಈನ್, ಸಂಪುಟ–50, ಪುಟ–70 ಅಡಿಟಿಪ್ಪಣಿ)

ಪವಿತ್ರ ಖುರ್‌ಆನ್ ಮಾನವನ ಬುದ್ಧಿಶಕ್ತಿ ಪ್ರೌಢಾವಸ್ಥೆಗೆ ಬಂದಾಗ ಒಳಿತು ಕೆಡುಕು ಅರಿವಿಗೆ ಬಂದಾಗ, ದುಷ್ಕೃತ್ಯಗಳ ಅತಿರೇಕಕ್ಕೆ ತಲುಪಿದಾಗ, ಮನುಷ್ಯನು ಸಂಪೂರ್ಣ ಅದರಲ್ಲಿ ಮುಳುಗಿದಾಗ ಅವನ ಸ್ಥಿತಿಗೆ ತಕ್ಕಂತೆ ಶಿಕಷಣವು ಬಂದಿತು. ಪವಿತ್ರ ಖುರ್‌ಆನ್ ಜಾಗತಿಕ ಗ್ರಂಥವಾಗಿದೆ ಎಂಬುದರ ಬಗ್ಗೆ ಹೇಳಿದರು. ನೆನಪಿಡಿರಿ. ಈ ಮಾತು ಸರಿಯಾಗಿದೆ. ಲೋಕ ಪ್ರಾರಂಭದಲ್ಲೂ ಒಂದು ದೈವಿಕ ಗ್ರಂಥ ಮನುಷ್ಯರಿಗೆ ಲಭಿಸಿತ್ತು. ಮತ್ತು ಹೇಳಿದರು. ಯಾರಾದರೂ ಪ್ರಶ್ನಿಸಿದರೆ ಪ್ರಾರಂಭಿಕ ಕಾಲದಲ್ಲಿ ಕೇವಲ ಒಂದು ದೈವಿಕ ಗ್ರಂಥ ಮನುಷ್ಯರಿಗೆ ಏಕೆ ನೀಡಲಾಯಿತು? ಪ್ರತಿಯೊಂದು ಸಮುದಾಯಕ್ಕೆ ಬೇರೆ ಬೇರೆ ಗ್ರಂಥಗಳು ಏಕೆ ನೀಡಲಿಲ್ಲ? ಅದರ ಉತ್ತರವೇನೆಂದರೆ ಪ್ರಾರಂಭಿಕ ಕಾಲದಲ್ಲಿ ಮನುಷ್ಯರ ಜನಸಂಖ್ಯೆ ತೀರ ಕಡಿಮೆಯಿತ್ತು. ಒಂದು ಸಮುದಾಯ ಎಂದು ಹೇಳಲು ಸಹ ಸಾಧ್ಯವಿರಲಿಲ್ಲ. ಆದುದರಿಂದ ಅವರಿಗೆ ಒಂದೇ ಗ್ರಂಥ ಸಾಕಾಗಿತ್ತು. ಮನುಷ್ಯರು ತದನಂತರ ಲೋಕದಲ್ಲಿ ನೆಲೆಸುವ ವಿಷಯದಲ್ಲಿ ಪ್ರಗತಿಗೊಂಡನು. ಪರಸ್ಪರ ಭೇಟಿಯಾಗಲು ಮಾರ್ಗಗಳು ತೆರೆಯಲ್ಪಟ್ಟವು. ಒಂದು ದೇಶದ ಜನರು ಮತ್ತೊಂದು ದೇಶದ ಜನರನ್ನು ಭೇಟಿಯಾಗುವಂತಾಗಲು ಏರ್ಪಾಡು ಉಂಟಾಯಿತು. ಭೂಮಿಯ ಇತರ ಭಾಗಗಳಲ್ಲಿಯೂ ಮನುಷ್ಯರು ಇದ್ದಾರೆ ಎಂದು ತಿಳಿದುಬಂತು. ಇಂತಹ ಸ್ಥಿತಿಯಲ್ಲಿ ಮನುಷ್ಯರನ್ನು ಒಂದು ಸಮುದಾಯವನ್ನಾಗಿ ಮಾಡಲು ಮತ್ತು ಭಿನ್ನತೆಯ ನಂತರ ಮುನಷ್ಯರನ್ನು ಒಂದೂಗೂಡಿಸಲು ಅಲ್ಲಾಹನು ಇರಾದೆ ಮಾಡಿಕೊಂಡನು. ಆಗ ಅಲ್ಲಾಹನು ಸಕಲ ಜನರಿಗಾಗಿ ಒಂದು ಗ್ರಂಥವನ್ನು ಅವತೀರ್ಣಗೊಳಿಸಿದನು. ಈ ಸುದ್ದಿ ಪವಿತ್ರ ಖುರ್‌ಆನ್‌ನಲ್ಲಿದೆ. ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಘೋಷಣೆ ಮಾಡುತ್ತದೆ. **ಯಾ ಅಯ್ಯುಹನ್ನಾಸು ಇನ್ನಿ ರಸೂಲುಲ್ಲಾಹಿ ಇಲೈಕುಮ್ ಜಮೀಅನ್** (ಅಲ್–ಅಅ್‌ರಾಫ್:159) ಅಂದರೆ ಎಲ್ಲಾ ಜನರಿಗೆ ಹೇಳು, ನಾನು ಎಲ್ಲರಿಗಾಗಿ ಪ್ರವಾದಿಯಾಗಿ ಬಂದಿರುತ್ತೇನೆ ಮತ್ತು ಹೇಳುತ್ತಾನೆ. **ವಮಾ ಅರ್ಸಲ್ನಾಕ ಇಲ್ಲಾ ರಹ್ಮತನ್ ಲಿಲ್‌ಆಲಮೀನ್** (ಅಲ್–ಅಂಬಿಯಾ:108) ಅಂದರೆ: ನನು ಸಕಲ ಲೋಕಗಳಿಗೆ ನಿನ್ನನ್ನು ಕರುಣೆಯ ರೂಪದಲ್ಲಿ ಕಳುಹಿಸಿದ್ದೇನೆ. ಮತ್ತೆ ಅಲ್ಲಾಹನು ನುಡಿಯುತ್ತಾನೆ: **ಲಿಯಕೂನ ಲಿಲ್ ಆಲಮೀನ ನಝೀರ** (ಅಲ್–ಪೂರ್ಖಾನ್: 2) ಅಂದರೆ: ನಾನು ಲೋಕದ ಜನರಿಗೆಲ್ಲ ಮುನ್ನೆಚ್ಚರಿಕೆ ನೀಡಲು ಕಳುಹಿಸಲ್ಪಟ್ಟನು. ನಾವು ಪ್ರಬಲವಾಗಿ ಹೇಳಬಲ್ಲೆವು. ಪವಿತ್ರ ಖುರ್‌ಆನ್‌ಗಿಂತ ಮುಂಚೆ ಯಾವ ದೈವಿಕ ಗ್ರಂಥವು ಈ ರೀತಿಯ ಘೋಷಣೆ ಮಾಡಲಿಲ್ಲ. ಬದಲು ಪ್ರತಿಯೊಬ್ಬರು ತನ್ನ ಪ್ರವಾದಿತ್ವವನ್ನು ತನ್ನ ಸಮುದಾಯಕ್ಕಷ್ಟೇ ಮೀಸಲಿಟ್ಟನು. ಕ್ರೈಸ್ತರು ತಮ್ಮ ನಬಿಯನ್ನು ದೇವನೆಂದು ಸಾರಿದರು. ಅವರ ಬಾಯಿಗಿಂತಲೂ ಅದೇ ಶಬ್ದಗಳು ಹೊರಡಿದವು. ನಾನು ಇಸ್ರಾಈಲಿನ ಕಳೆದುಹೋದ ಕುರಿಗಳಿಗೆ ಅಲ್ಲದೇ ಯಾರ ಕಡೆಯೂ ಕಳುಹಿಸಲ್ಪಟ್ಟಿಲ್ಲ ಎಂದರು. ಹಝ್ರತ್ ಈಸಾ(ಅ) ಅವರು ಅದೇ ಹೇಳಿದ್ದರು. ಬೈಬಲ್‌ನಲ್ಲಿ ಮತ್ತು ಕಾಲದ ಅವಸ್ಥೆಯ ಅದೇ ಸಾಕ್ಷಿವಹಿಸಿತ್ತು. ಪವಿತ್ರ ಖುರ್‌ಆನ್‌ನ ಈ ಸಾರ್ವತ್ರಿಕ ಪ್ರಚಾರದ ದಾವೆಯ ಸಮುದಾಯಕ್ಕೆ ತಕ್ಕಂತೆಯೇ ಆಗಿದೆ. ಏಕೆಂದರೆ ಹಝ್ರತ್ ಪೈಗಂಬರ್ (ಸ) ರವರ ಆಗಮನ ಸಮಯ ಪ್ರಚಾರದ ಸಾರ್ವಜನಿಕ ಬಾಗಿಲು ತೆರೆಯಲ್ಪಟ್ಟಿತ್ತು. (ಚಶ್ಮ ಮಅ್‌ರಿಫತ್, ರೂಹಾನಿ ಖಝಾಈನ್, ಸಂಪುಟ–23, ಪುಟ 74–77)

ಪವಿತ್ರ ಖುರ್‌ಆನ್‌ನ ನಾಲ್ಕು ಘಟಕಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಿಳಿಸಿರುವರು. ಮೊದಲನೆಯದ್ದು 'ಇಲ್ಲತೆ ಫಾಇಲಿ' ಎಂದರೆ ಅದನ್ನು ನಿರ್ವಹಿಸುವವನು ಯಾರು ಮತ್ತು ಅದರ ಕಾರಣಗಳೇನು ಎಂಬುದಾಗಿದೆ. ಎರಡನೇಯದು 'ಇಲ್ಲತೆ ಸೂರಿ'. ಅದರಾಂತರಿಕ ಹಾಗೂ ಬಾಹ್ಯ ಕಾರಣಗಳೇನು. ಮೂರನೆಯದ್ದು 'ಇಲ್ಲತೆ ಮಾದಿ', ಅಂದರೆ ಅದರ ಭೌತಿಕವಾದ ಪ್ರಯೋಜನಗಳೇನು ಎಂಬುದಾಗಿದೆ. 'ಇಲ್ಲತೇ ಗ್ಹಾಯಿ' ಎಂದರೆ ಇವೆಲ್ಲದರ ಮೂಲ ಕಾರಣ ಮತ್ತು ಉದ್ದೇಶವೇನು ಎಂಬುದಾಗಿದೆ. 'ಇಲ್ಲತೆ ಫಾಯಿಲಿ' ಎಂಬುದಕ್ಕೆ ಸಂಬಂಧಿಸಿ ಅಲ್ಲಾಹನು ಅಲಿಫ್ ಲಾಮ್ ಮೀಯ್ ಅಥವಾ ಅಲ್ಲಾಹನು ಆಅ್‌ಲಮ್ ಎಂದು ಹೇಳಿರುವನು. ಎಂದರೆ ನಾನು ಎಲ್ಲವನ್ನು ಬಲ್ಲವನಾದ ಅಲ್ಲಾಹನಾಗಿರುವೆನು. 'ಇಲ್ಲತೆ ಮಾದಿ' **ಝಾಲಿಕಲ್ ಕಿತಾಬ್** ಆಗಿದೆ. ಎಂದರೆ ಈ ಗ್ರಂಥ ಎಲ್ಲರಿಗಿಂತ ಹೆಚ್ಚು ಜ್ಞಾನವುಳ್ಳ ಅಲ್ಲಾಹನ ಕಡೆಯಿಂದ ಅವತೀರ್ಣಗೊಂಡಿದೆ. ಇದರ ಪ್ರಕಾರ ನಡೆಯುವುದರಿಂದ ನೈಜವಾದ ಪ್ರಯೋಜನಗಳನ್ನು ಗಳಿಸಬಹುದಾಗಿದೆ. **'ಇಲ್ಲತೆ ಸೂರಿ' ಲಾ ರೈಬ ಫೀಹಿ"** ಆಗಿದೆ. ಎಂದರೆ ಈ ಗ್ರಂಥ ಗುಣ ವೈಶಿಷ್ಟ್ಯ ಮತ್ತು ಶ್ರೇಷ್ಠತೆ ಏನೆಂದರೆ, ಇದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ಅದರಲ್ಲಿರುವ ಸಂಗತಿಗಳು ಸದೃಢವಾದುದಾಗಿದೆ ಮತ್ತು ಅದರಲ್ಲಿರುವ ವಾದಗಳು ಪುರಾವೆಯುಕ್ತ ಮತ್ತು ಸ್ಪಷ್ಟವಾದವು ಆಗಿವೆ. ಈ ಗ್ರಂಥದ ಉದ್ದೇಶ ದೇವಭಕ್ತರಿಗೆ ಸನ್ಮಾರ್ಗವನ್ನು ತೋರಿಸುವುದಾಗಿದೆ. (ಮಲ್ಫೂಝಾತ್ ಸಂಪುಟ–8, ಪುಟ 306–307) ಒಂದು ಯಥಾರ್ಥ ಧಾರ್ಮಿಕ ಗ್ರಂಥದ ಇದೇ ಉದ್ದೇಶವಾಗಿರಬೇಕಾಗಿದೆ.

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸೂರಃ ಅಲ್ ಬಖರದ ಎರಡನೇ ಹಾಗೂ ಮೂರನೇಯ ವಚನದ ಅನುವಾದ ಪ್ರಸ್ತುತಪಡಿಸುತ್ತಾ ಹೇಳುತ್ತಾರೆ: ತಖ್ವಾ (ಭಯಭಕ್ತಿ) ಅನ್ನು ಎಂಥ ಒಂದು ಉನ್ನತ ದರ್ಜೆಯ ವಸ್ತು ಎಂದು ಹೇಳಲಾಗಿದೆ ಎಂದರೆ, ಅದನ್ನೇ ಪವಿತ್ರ ಖುರ್‌ಆನ್ ಇಲ್ಲತೆ ಗ್ಹಾಯಿ ಎನ್ನಲಾಗಿದೆ. ಅಂದಹಾಗೆ ಎರಡನೇ ಸೂರಃ ಹೀಗೆ ಪ್ರಾರಂಬಿಸಲಾಯಿತು: **ಅಲಿಫ್ ಲಾಮ್ ಮೀಮ್; ಝಾಲಿಕಲ್ ಕಿತಾಬು ಲಾರೈಬ ಫೀಹಿ ಹುದಲ್ಲಿಲ್ ಮುತ್ತಖೀನ್**. (ಅಲ್‌ಬಖರ: 2–3) ನನ್ನ ಧರ್ಮವೇನೆಂದರೆ ಪವಿತ್ರ ಖುರ್‌ಆನ್‌ನ ಈ ಜೋಡನೆ ಬಹುದೊಡ್ಡ ದರ್ಜೆ ಹೊಂದಿದೆ. ಅಲ್ಲಾಹನು ಅದರಲ್ಲಿ ನಾಲ್ಕು ಇಲಲ್ (ಘಟಕ) ಗಳನ್ನು ವಿವರಿಸಿದ್ದಾನೆ. ಅಂದರೆ ನಾಲ್ಕು ಕಾರಣಗಳು, "ಇಲ್ಲತೆ ಫಾಇಲಿ, ಸೂರಿ, ಮಾದಿ ಮತ್ತು ಗ್ಹಾಯಿ, ಎಲ್ಲರ ಜೊತೆಯಲ್ಲಿ ಈ ನಾಲ್ಕು ಇಲಲ್‌ಗಳಿವೆ. ಪವಿತ್ರ ಖುರ್‌ಆನ್ ಅತ್ಯಂತ ಪರಿಪೂರ್ಣ ರೀತಿಯಲ್ಲಿ ಅದನ್ನು ತೋರಿಸಿಕೊಡುತ್ತದೆ. **ಅಲಿಫ್ ಲಾಮ್ ಮೀಮ್** ಇದರಲ್ಲಿ ಸಂಕೇತವೇನೆಂದರೆ ಎಲ್ಲವು ಬಲ್ಲವನಾದ ಅಲ್ಲಾಹನು ಈ ಗ್ರಂಥವನ್ನು ಹಝ್ರತ್ ಪೈಗಂಬರ್ (ಸ) ಅವರ ಮೇಲೆ ಅವತರಿಸಿದ್ದಾನೆ, ಅಂದರೆ ಅವನ ಕರ್ತನು ಅಲ್ಲಾಹನಾಗಿದ್ದಾನೆ. **ಝಾಲಿಕಲ್ ಕಿತಾಬು** ಇದು ಧಾತುವಾಗಿದೆ. ಅಂದರೆ "ಪವಿತ್ರ ಖುರ್‌ಆನ್" ಅಥವಾ ಹಿಗೆ ಹೇಳಿರಿ. ಇದು ಇಲ್ಲತೆ ಮಾದಿಯಾಗಿದೆ. ಅಂದರೆ ಪ್ರಸಕ್ತ ಸ್ಥಿತಿಯಲ್ಲಿ ನಮ್ಮಲ್ಲಿರುವ ಈ ಗ್ರಂಥ, ಎಂಥ ಗ್ರಂಥವಾಗಿದೆ ಎಂದರೆ ಅದರ ಮೇಲೆ ನಡೆದು ಮನುಷ್ಯನು ತನ್ನ ಜಿವನದ ಉದ್ದೇಶ ಸಾದಿಸಬಹುದು. ಇಲ್ಲತೆ ಸೂರಿ **"ಲಾರೈಬ ಫೀಹಿ"** ಎಲ್ಲದರಲ್ಲೂ ಸಂಶಯ, ಅನುಮಾನ ಕಾಣಬಹುದು. ಆದರೆ ಪವಿತ್ರ ಖುರ್‌ಆನ್ ಎಂತಹ ಗ್ರಂಥವಾಗಿದೆ ಎಂದರೆ ಅದರಲ್ಲಿ ಯಾವ ಸಂಶಯವು ಇಲ್ಲ. ಅಲ್ಲಾಹನು ಈ ಗ್ರಂಥದ ಮಹಿಮೆ ಸಂಶಯರಹಿತ ಎನ್ನುವಾಗ ಪ್ರತಿಯೊಬ್ಬ ವಿವೇಕವಂತನು ಪುಲಕಿತಗೊಳ್ಳುವನು ಮತ್ತು ಅದರಂತೆ ನಡೆಯಲು ಇಷ್ಟಪಡುವನು. ನಾವು ವಿಷಾದಪೂರ್ವಕವಾಗಿ ಹೇಳುವೆವು. ಪವಿತ್ರ ಖುರ್‌ಆನ್‌ನ ಜ್ವಲ, ಪವಿತ್ರ ಸ್ಥಾನವನ್ನು ಲೋಕದ ಮುಂದೆ ಪ್ರಸ್ತುತಪಡಿಸಿಲ್ಲ. ಇಲ್ಲದಿದ್ದರೆ ಪವಿತ್ರ ಖುರ್‌ಆನ್‌ನ ಗುಣಗಳು ಮತ್ತು ಅದರ ವೈಶಿಷ್ಟ್ಯಗಳು, ಅವರ ಸೌಂದರ್ಯ ತನ್ನೊಳಗೆ ಎಂಥ ಸೆಳೆತ ಮತ್ತು ಚುಂಬನ ಹೊಂದಿದೆ ಎಂದರೆ, ಹೃದಯವು ತಂತಾನೆ ಅದರತ್ತ ಸೆಳೆಯಲ್ಪಡುತ್ತದೆ.

ಉದಾಹರಣೆಗೆ ಒಂದು ಸುಂದರವಾದ ತೋಟವನ್ನು ನೋಡಿದರೆ ಅದರಲ್ಲಿರುವ ಪರಿಮಳಯುಕ್ತ ವೃಕ್ಷಗಳು ಮನವನ್ನು ತಣಿಸುವಂತಿದ್ದರೆ, ಅದರ ಬದಿಯಲ್ಲಿ ಸ್ವಚ್ಛ ನೀರು ಹರಿಯುತ್ತಿದ್ದರೆ ಅದನ್ನು ವಿವರಿಸತೊಡಗಿದರೆ ಪ್ರತಿಯೊಬ್ಬರ ಮನಸ್ಸು ಅದನ್ನು ನೋಡಬಯಸುವುದು ಸಹಜವಾಗಿರುತ್ತದೆ. ಅದರಲ್ಲಿ ಕೆಲ ಸರೋವರಗಳು ರೋಗಿಗಳಿಗೆ ಶಮನ ನೀಡುವಂತಹದ್ದು ಇವೆ. ಇನ್ನಷ್ಟು ಜನರು ಅಲ್ಲಿಗೆ ಹೊಗಬಯಸುವರು. ಅದೇ ರೀತಿ ಪವಿತ್ರ ಖುರ್‌ಆನ್‌ನ ಗುಣಗಳು ಮತ್ತು ವೈಶಿಷ್ಟ್ಯಗಳು ಅತ್ಯಂತ ಸುಂದರ ಮತ್ತು ಪ್ರಭಾವ ರೀತಿಯಲ್ಲಿ ವರ್ಣಿಸಿದರೆ ಆತ್ಮವು ಪೂರ್ಣ ಶ್ರದ್ಧೆಯಿಂದ ಇತ್ತ ಸೆಳೆಯಲ್ಪಡುತ್ತದೆ. ನಿಜವಾಗಿಯೂ ಆ ಸಾಮರ್ಥ್ಯ ಖುರ್‌ಆನ್‌ಗೆ ಇದೆ.

ಆದುದರಿಂದ ಅಲ್ಲಾಹನು ಹೇಳಿದನು. **ಹುದಲ್ ಲಿಲ್‌ಮುತ್ತಖೀನ್** ಭಯಭಕ್ತಿಯುಳ್ಳವರಿಗೆ ಈ ಗ್ರಂಥ ಮಾರ್ಗದರ್ಶನವಾಗಿದೆ. ಇನ್ನೊಂದೆಡೆ **ಲಾ ಯಮುಸ್ಸುಹು ಇಲ್ಲಲ್ ಮುತಹ್ಹರೂನ್** (ಅಲ್ ವಾಖಿಅ–80) ಪವಿತ್ರ ಶುದ್ಧ ಜನರಿಗಲ್ಲದೇ ಅದರ ಮಹಿಮೆ ಯಾರಿಗೆ ತಿಳಿಯಲು ಸಾಧ್ಯವಾಗುವುದಿಲ್ಲ. ಹೇಳಿದರು. ಅದರ ತಾತ್ಪರ್ಯ **ಹುದಲ್ ಲಿಲ್ ಮುತ್ತಖೀನ್** ಜನರೇ ಆಗಿದ್ದಾರೆ. ಅದರಿಂದ ಸ್ಪಷ್ಟವಾಗುತ್ತದೆ. ಪವಿತ್ರ

ಖುರ್‌ಆನ್ ಭಯಭಕ್ತಿಯುಳ್ಳವರಿಗೆ ಮಾತ್ರ ಮಾರ್ಗದರ್ಶನವಾಗಿದೆ. (ಮಲ್ಫುಝಾತ್, ಸಂಪುಟ-1, ಪುಟ 424-425 ಸಂಚಿಕೆ 1984)

ಇಂದಿನ ನಾಮಧಾರಿ ಮುಲ್ಲರು ಪವಿತ್ರ ಖುರ್‌ಆನ್‌ನ ಅನಂತವಾದ ಆಧ್ಯಾಪನೆಯನ್ನು ಯಾವ ರೀತಿಯಲ್ಲಿ ಮುಂದಿರಿಸಿದ್ದಾರೆ ಎಂದರೆ, ಅದರಿಂದ ಇಸ್ಲಾಮಿನ ವಿರೋಧಿಗಳಿಗೆ ಪವಿತ್ರ ಖುರ್‌ಅನ್‌ನ ಮೇಲೆ ಆಕ್ಷೇಪವೆತ್ತಲೂ ಸಂದರ್ಭ ಲಭಿಸಿದೆ. ಇಂದು ತನ್ನೊಳಗೆ ದೇವಭಕ್ತಿಯನ್ನು ಉಂಟು ಮಾಡಿಕೊಂಡು ಅದರ ಆಧ್ಯಾಪನೆಯ ಶ್ರೇಷ್ಠತೆಗಳನ್ನು ತಮ್ಮ ಮಾತು ಮತ್ತು ಕೃತ್ಯದಿಂದ ಸಾಬೀತುಗೊಲಿಸಬೇಕಾದುದು ಅಹ್ಮದಿಯರ ಕೆಲಸವಾಗಿದೆ. ಪವಿತ್ರ ಖುರಆನ್ ಬಲ್ಲ ರೋಗಿಗಳಿಗೆ ಚಿಕಿತ್ಸೆಯಾಗಿದೆ ಎಂದು ಲೋಕ್ಕೆ ಹೇಳಿಕೊಡಿರಿ. ದೇವಭಕ್ತಿಯಲ್ಲಿ ನಡೆಯುತ್ತಾ ಪವಿತ್ರ ಖುರ್‌ಆನ್ ಪ್ರಕಾರ ನಡೆಯಲು ಅಲ್ಲಹನು ನಮಗೆ ಸೌಭಾಗ್ಯ ನೀಡಲಿ. ಆಮೀನ್

ತುಂಬಾ ಆಳವಾದ ವಿಷಯಗಳಿವೆ ತುಂಬಾ ಗಮನವಹಿಸಿ ಆಲಿಸಬೇಕಾಗಿದೆ. ತುಂಬಾ ಗಮನಕೊಟ್ಟು ಅದರಂತೆ ನಡೆದುಕೊಳ್ಳಬೇಕಾಗಿದೆ. ಪವಿತ್ರ ಖುರ್‌ಆನ್ನು ತುಂಬಾ ಗಮನವಹಿಸಿ ಓದಬೇಕಾಗಿದೆ. ಇದೀಗ ನಾನು ದುಆ ಪ್ರಾರ್ಥನೆಗೋಸ್ಕರ ಪ್ರೇರಣೆ ನಿಡಬಯಸುತ್ತೇವೆ. ಬಾಂಗ್ಲಾದೇಶದಲ್ಲಿ ಈಗ ಜಲ್ಸ ಸಾಲಾನ ನಡೆಯುತ್ತಿದೆ. ಇಂದು ಅವರ ಮೊದಲ ದಿನವಾಗಿತ್ತು. ಆದರೆ ಅಲ್ಲಿ ವಿರೋಧಿಗಳು ಜಲ್ಸ ಪ್ರದೇಶಕ್ಕೆ ಬಂದು ದಾಳಿ ನಡೆಸಿದರು. ಅನೇಕ ಜನರು ಗಾಯಗಳು ಕೂಡ ಆದರು. ಕೆಲವರು ತೀವ್ರವಾಗಿ ಗಾಯಗಳು ಕುಡ ಆಗುವ ರೀತಿಯಲ್ಲಿ ಹಲ್ಲೆ ನಡೆಸಿದವರು ಎಂದು ಇಲ್ಲಿಯವರೆಗೆ ಲಭಿಸಿರುವ ವಾರ್ತೆಯಿಂದ ತಿಳಿದು ಬಂದಿದೆ. ಅದಲ್ಲದೇ ಆ ಪ್ರದೇಶದ ಅಹ್ಮದಿಯರ ಮನೆಯನ್ನು ಸುಡುತ್ತಿದದಾರೆ. ಎಷ್ಟು ಹಾನಿ ಉಂಟಾಗಿದೆ ಎಂಬುದರ ಅಂದಾಜು ಇಗಿಲ್ಲ. ಅಲ್ಲಾಹನು ಅಹ್ಮದಿಯರ ಅವರ ಉಪದ್ರವದಿಂದ ಸಂರಕ್ಷಿಸಲಿ ಮತ್ತು ಅವರನ್ನು ಕಳುಹಿಸಿಕೊಡಲಿ. ಅವರಿಗಾಗಿ ಸನ್ಮಾರ್ಗದ ದುಆವನ್ನು ಮಾಡುವಂತಿಲ್ಲ. **ಅಲ್ಲಾಹಮ್ಮ ಮುಝ್ಝಿಕ್‌ಹುಮ್ ಕುಲ್ಲ ಮುಮಝ್ಝಖಿನ್ ವಸಹ್ಹಿಕ್‌ಹುಮ್ ತಸ್ಹೊಖಾ** ಎಂಬ ದುಆವೇ ನಾಲಿಗೆಯಿಂದ ಮತ್ತು ಹೃದಯಿಂದ ಹೊರಡುತ್ತದೆ.

ಅದೇ ರೀತಿ ಪಾಕಿಸ್ತಾನದ ಅವಸ್ಥೆಗಾಗಿಯೂ ದುಆ ಮಾಡಿರಿ. ಅಲ್ಲೂ ಅಲ್ಲಾಹನು ಅಹ್ಮದಿಯರ ಸ್ಥಿತಿಗತಿಗಳನ್ನು ಸರಿಯಾಗಿ ಇಡಲಿ. ಬುರ್ಕಿನಾಫಾನೋದಲ್ಲೂ ಈಗ ಅಪಾಯುಗಳು ತಲೆದೋರುತ್ತಿವೆ. ಅವರಿಗಾಗಿಯೂ ದುಆ ಮಾಡಿರಿ. ಅದೇ ರೀತಿಯಲ್ಲಿ ಅಲ್‌ಜೀರಿಯಾದಲ್ಲೂ ಅಹ್ಮದಿಯರ ಮೇಲೆ ಕೆಲವು ಮೊಕದ್ದೊಮ್ಮೆಗಳು ಇವೆ. ಅವರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಎಲ್ಲೆಡೆ ಅಹ್ಮದಿಯರನ್ನು ಸಂರಕ್ಷಿಸಲಿ.

ಬಂಗ್ಲಾದೇಶದಲ್ಲಿ ಅಲ್ಲಿನ ಸರಕಾರದ ವ್ಯವಸ್ಥಾಪಕರು ಚಿಂತಿಸಬೇಡಿ, ನೀವು ಜಲ್ಸ ನಡೆಸಿರಿ, ನಾವು ಸಂಪೂರ್ಣ ಸಂರಕ್ಷಣೆ ನೀಡುವೆವು ಎಂದು ಹೇಳಿದ್ದರು ಆದರೆ ಭಯೋತ್ಪಾದಕ ಅಗ್ರವಾದಿ ಮುಲ್ಲಾಗಳು ತಮ್ಮ ತಂಡದೊಂದಿಗೆ ಬಂದಾಗ ಅಲ್ಲಿ ನಿಂತಿದ್ದ ಪೋಲೀಸರು ತಮಾಷೆ ನೋಡುವ ರೀತಿಯಲ್ಲಿ ಕುಳಿತುಕೊಂಡಿದ್ದರು. ಅವರು ಏನೂ ಮಾಡುತ್ತಿರಲಿಲ್ಲ. ಹೇಗಿದ್ದರೂ ನಾವು ಅಲ್ಲಾಹನ ಮುಂದೆ ಬಾಗಬೇಕು. ಅಲ್ಲಾಹನೊಡನೆ ದುಆ ಮಾಡಬೇಕು. ನಮ್ಮ ಈ ಸಹೋದರರ ಕಷ್ಟತೆಗಳನ್ನು ಅಲ್ಲಾಹನು ಬೇಗನೇ ದೂರ ಸರಿಸಲಿ. ಆಮೀನ್

...*...*...*...

*(ಪುಟ ಸಂಖ್ಯೆ 12ರ ಉಳಿದ ಭಾಗ)*

**ರಬ್ಬಿಲ್ ಆಲಮೀನ್** ನಲ್ಲಿ ನಿಜವಾದ ತೌಹೀದ್ ಸ್ಥಾಪನೆಯಾದರೆ ಮತ್ತು ಲೋಕಗಳ ಪ್ರಭುವಿನ ಸ್ತುತಿ ಮನುಷ್ಯನ ನಾಲಿಗೆಯ ಮೇಲಿದ್ದರೆ, ಯಾವುದೇ ರಾಷ್ಟ್ರವು ಹೃದಯದಲ್ಲಿ ದ್ವೇಷವನ್ನು ಹೊಂದಲು ಸಾಧ್ಯವಿಲ್ಲ, ಕ್ರಿಶ್ಚಿಯನ್ನರಿಗಾಗಲೀ, ಹಿಂದೂಗಳಿಗಾಗಲಿ ಅಥವಾ ಯಹೂದಿಗಳಿಗಾಗಲಿ ಅವರ ಮನಸ್ಸಿನಲ್ಲಿ ದ್ವೇಷ ಹುಟ್ಟಲು ಸಾಧ್ಯವಿಲ್ಲ.

ಒಂದು ಕಡೆ ಅವರನ್ನು ನಾಶಮಾಡಲು ಬಯಸುವುದು ಮತ್ತು ಮತ್ತೊಂದೆಡೆ ಅವರನ್ನು ನೋಡಿದ ನಂತರ ಸರ್ವಶಕ್ತನಾದ ಅಲ್ಲಾಹನನ್ನು ಹೊಗಳುವುದು ಮತ್ತು ವೈಭವೀಕರಿಸುವುದು ಹೇಗೆ ಸಾಧ್ಯ. ಇದು ಆಗಲಾರದು. ಆದ್ದರಿಂದ, ನಿಜವಾದ ಏಕದೇವರಾಧಕನು ಮಾತ್ರ ನಿಜವಾದ ಶಾಂತಿ ಮತ್ತು ಭದ್ರತೆಯನ್ನು ಸೃಷ್ಟಿಸುವವನಾಗಿದ್ದಾನೆ. ಮುಸ್ಲಿಮರು ಈ ಅಂಶವನ್ನು ನಿಜವಾಗಿಯೂ ಅರ್ಥಮಾಡಿಕೊಂಡರೆ ಮತ್ತು ಅದಕ್ಕೆ ಅನುಗುಣವಾಗಿ ತಮ್ಮ ಜೀವನವನ್ನು ಅಳವಡಿಸಿಕೊಂಡರೆ, ಆಗ ಅವರು ಪ್ರಪಂಚದ ನಿಜವಾದ ಶಾಂತಿ ಪ್ರಿಯರಾಗುತ್ತಾರೆ. ಆದರೆ, ಅದಕ್ಕಾಗಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ನಿಜವಾದ ಸೇವಕನೊಂದಿಗೆ ಸೇರಬೇಕಾಗುವುದು ಅವಶ್ಯಕವಾಗಿದೆ, ಆಗ ಮಾತ್ರ ದೈವಜ್ಞಾನದ ಸರಿಯಾದ ಅರಿವು ಗ್ರಹಿಕೆಯಾಗಬಹುದು.

ಅದೇ ಸಮಯದಲ್ಲಿ, ನಮ್ಮ ಪರಿಸ್ಥಿತಿಗಳನ್ನು ಮೌಲ್ಯಮಾಪನ ಮಾಡಲು ಇದು ನಮ್ಮ ಮೇಲೆ ಜವಾಬ್ದಾರಿಯನ್ನು ನೀಡುತ್ತದೆ ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ. ನಮ್ಮ ನಮಾಝಿನಲ್ಲಿ ನಮ್ಮ **ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್** ಪಠಣವು ಕೇವಲ ಬಾಯಿಯ ಮಾತುಗಳಾಗಿ ಮತ್ತು ಮನಸ್ಸು ಅದರ ಆಳದ ಅರಿವಿನಿಂದ ಖಾಲಿಯಾಗಿದ್ದರೆ, ನಾವು ಕೂಡ ಕಿಡಿಗೇಡಿಗಳನ್ನು ಸೃಷ್ಟಿಸುವವರಲ್ಲಿ ಸೇರುತ್ತೇವೆ. ಶಾಂತಿ ಮತ್ತು ಭದ್ರತೆಯನ್ನು ಹರಡುವವರಲ್ಲಿ ಮತ್ತು ರಸೂಲುಲ್ಲಾಹ್(ಸ) ಅವರು ತಂದ ಬೋಧನೆಗಳನ್ನು ಅನುಸರಿಸುವವರಲ್ಲಿ ಇರುವುದಿಲ್ಲ.

ಆದ್ದರಿಂದ ಸಾಕಷ್ಟು ಚಿಂತನೆಯ ಸನ್ನಿವೇಶವಾಗಿದೆ, ಬಹಳಷ್ಟು ಯೋಚಿಸಬೇಕಾದ ಅಗತ್ಯವಿದೆ, ಬಹಳ ಕಾಳಜಿವಹಿಸಬೇಕಾದ ಸಂಗತಿಯಾಗಿದೆ. ಇಂದು, ಜಗತ್ತಿನಲ್ಲಿ ನಿಜವಾದ ಶಾಂತಿ ಮತ್ತು ಭದ್ರತೆಯನ್ನು ಸೃಷ್ಟಿಸಲು ಅಲ್ಲಾಹನಲ್ಲಿ ಮಾತ್ರ ತನ್ನ ನಂಬಿಕೆಯನ್ನು ಬಲಪಡಿಸುವುದು ಪ್ರತಿಯೊಬ್ಬ ಅಹ್ಮದಿಯ ಕಾರ್ಯವಾಗಿದೆ. ದೇವರ ಪ್ರೀತಿಯು ಅವರ ಹೃದಯದಲ್ಲಿ ನೆಲೆಗೊಳ್ಳಲಿ, ಅದರ ಆಜ್ಞೆಗಳನ್ನು ಅನುಸರಿಸಲು, ರಸೂಲುಲ್ಲಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ಅವತರಿಸಿದ ಬೋಧನೆಗಳನ್ನು, ಅಂದರೆ ಪವಿತ್ರ ಖುರ್‌ಆನ್, ಅವರ ಜೀವನದ ಭಾಗವಾಗಿ ಮಾಡಿಕೊಳ್ಳಿ. ಪವಿತ್ರ ಖುರ್‌ಆನ್‌ನ ಪ್ರತಿಯೊಂದು ಆಜ್ಞೆಗಳು ಮತ್ತು ರಸೂಲುಲ್ಲಾಹ್(ಸ) ಅವರ ಪ್ರತಿಯೊಂದು ಮಾತುಗಳು ನಮ್ಮ ಮಾತು ಮತ್ತು ಕಾರ್ಯಗಳ ಭಾಗವಾಗುವಂತಹ ಮಟ್ಟಕ್ಕೆ ನಮ್ಮ ಮಾನದಂಡಗಳು ಹೋದಾಗ, ನಾವು ಜಗತ್ತಿಗೆ ಇಸ್ಲಾಮ್ ಧರ್ಮದ ನೈಜ ಸಂದೇಶವನ್ನು ತಿಳಿಸಲು ಸಾಧ್ಯವಾಗುತ್ತದೆ. ನಾವು ಅವರಿಗೆ ನಿಜವಾದ ಶಾಂತಿಯ ಮಾರ್ಗವನ್ನು ಮಾತ್ರ ಕಲಿಸುವುದಿಲ್ಲ, ಆದರೆ ನಾವು ನಮ್ಮ ಕ್ರಿಯೆಗಳ ಮೂಲಕ ಅವರಿಗೆ ಕಲಿಸುತ್ತೇವೆ ಮತ್ತು ಇದು ಜಗತ್ತಿನಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸುವ ಸಾಧನವಾಗಿದೆ ಮತ್ತು ಇದು ಶಾಂತಿಯ ದೊಡ್ಡ ಅಸ್ತಿತ್ವವನ್ನು ಸಾಬೀತುಪಡಿಸುವ ಸಾಧನವಾಗಿದೆ. ಇದು ಇಸ್ಲಾಂ ಧರ್ಮವನ್ನು ವಿರೋಧಿಸುವವರ ಬಾಯಿ ಮುಚ್ಚಿಸುವ ಸಾಧನವಾಗಿದೆ. ಆದಾಗ್ಯೂ, ಇಂದು ಈ ಕೆಲಸವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜಮಾಅತ್‌ಗೆ ವಹಿಸಲಾಗಿದೆ. ಅದಕ್ಕೆ ತಕ್ಕಂತೆ ನಾವು ನಮ್ಮ ಪಾತ್ರವನ್ನು ಮನೆಯಿಂದ ಅಂತರರಾಷ್ಟ್ರೀಯ ಮಟ್ಟದವರೆಗೆ ನಿರ್ವಹಿಸದಿದ್ದರೆ, ನಾವು ಶಾಂತಿ ಮತ್ತು ಭದ್ರತೆಯಿಂದ ಬದುಕುತ್ತೇವೆ ಎಂಬ ಭರವಸೆ ಇಲ್ಲ. ನಮ್ಮ ತಲೆಮಾರುಗಳು ಶಾಂತಿ ಮತ್ತು ಭದ್ರತೆಯಿಂದ ಬದುಕುತ್ತವೆ ಎಂಬ ಭರವಸೆ ಇಲ್ಲ. ವಿಶ್ವ ಶಾಂತಿ ಮತ್ತು ಭದ್ರತೆಯ ಭರವಸೆ ಇಲ್ಲ. ಜಗತ್ತನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಮಾರ್ಗವನ್ನು ಅಲ್ಲಾಹನು ದಯಪಾಲಿಸಲಿ. ನಮ್ಮ ಕರ್ತವ್ಯವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಅಲ್ಲಾಹನು ನಮಗೆ ಅವಕಾಶವನ್ನು ನೀಡಲಿ.

ನಾವು ಈಗ ದುಆ ಮಾಡುತ್ತೇವೆ. ದುಆವಿನಲ್ಲಿ, ಜಲ್ಸದಲ್ಲಿ ಎಲ್ಲಾ ಭಾಗವಹಿಸುವವರನ್ನು ಜಲ್ಸದ ಅನುಗ್ರಹಗಳನ್ನು ಹೊಂದುವಂತೆ ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸಬೇಕು ಮತ್ತು ಪ್ರತಿಯೊಬ್ಬರಿಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರಾರ್ಥನೆಗಳನ್ನು ಆನುವಂಶಿಕವಾಗಿ ಪಡೆಯುವಂತೆ ಮಾಡಲಿ. ಜಗತ್ತಿನಲ್ಲಿ ಆದಷ್ಟು ಬೇಗ ಶಾಂತಿ ಮತ್ತು ಭದ್ರತೆಯು ಸೃಷ್ಟಿಯಾಗಲಿ, ಇದರಿಂದ ನಾವು ನಮ್ಮ ಜಲ್ಸಗಳನ್ನು ದೊಡ್ಡ ಪ್ರಮಾಣದಲ್ಲಿ ಮತ್ತು ಅದೇ ವೈಭವದಿಂದ ಎಲ್ಲಾ ರೀತಿಯ ಚಿಂತೆಗಳಿಂದ ಮುಕ್ತಗೊಳಿಸಿ ಆಯೋಜಿಸುವಂತಾಗಲಿ ಮತ್ತು ಜಲ್ಸಗಳನ್ನು ನಮ್ಮ ಆಧ್ಯಾತ್ಮಿಕ ಮತ್ತು ಬೌದ್ಧಿಕ ಬಾಯಾರಿಕೆಯನ್ನು ನೀಗಿಸುವ ಸಾಧನವಾಗಿಸಲಿ. ವಾಸ್ತವವಾಗಿ, ನಿಮ್ಮ ಜೀವನವನ್ನು ಇಸ್ಲಾಮಿಕ್ ಬೋಧನೆಗಳಿಗೆ ಅನುಗುಣವಾಗಿ ಹೊಂದಲಿ. ನಾವು ಅಲ್ಲಾಹನ ಪ್ರೀತಿ ಮತ್ತು ಅನುಗ್ರಹಗಳನ್ನು ಪಡೆಯುವಂತಾಗಲಿ. ಸರ್ವಶಕ್ತನಾದ ಅಲ್ಲಾಹನು ನಮಗೆ ಅದರ ತೌಫೀಕ್ ನೀಡಲಿ. ಆಮೀನ್ (ದುಆ)

ದುಆ ನಂತರ, ಹುಝೂರ್ ಅನ್ವರ್(ಅತಬಿಅ) ಹೇಳಿದರು: ಮೊದಲು ಜರ್ಮನಿಯ ಜಲ್ಸಾದ ಹಾಜರಾತಿಯನ್ನು ಆಲಿಸಿಕೊಳ್ಳಿ ನಂತರ ಘೋಷಣೆಯನ್ನು ಕೂಗಿರಿ. ಜಲ್ಸಾದಲ್ಲಿ ನಮ್ಮ ಒಟ್ಟು ಹಾಜರಾತಿ ಹತ್ತೊಂಬತ್ತು ಸಾವಿರದ ಏಳುನೂರ ಎಂಬತ್ತೆರಡು ಎಂದು ಹೇಳಲಾಗುತ್ತಿದೆ, ಇದರಲ್ಲಿ ಮಹಿಳೆಯರು ಒಂಬತ್ತು ಸಾವಿರದ ನಾನೂರಾ ಎಂಬತ್ತೆರಡು ಮತ್ತು ಪುರುಷರು ಹತ್ತು ಸಾವಿರದ ಮುನ್ನೂರು ಮತ್ತು ಹೆಚ್ಚುವರಿಯಾಗಿ ಜನರ ಸಂಖ್ಯೆ ಇತರ ವಿಧಾನಗಳ ಮೂಲಕ ಜಲ್ಸ ಸಾಲಾನದ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದಾರೆ ಮತ್ತು ಕೇಳುತ್ತಿದ್ದಾರೆ. ಅದರ ಸಂಖ್ಯೆ ನಲವತ್ತು ಸಾವಿರಕ್ಕಿಂತ ಹೆಚ್ಚಾಗಿರುತ್ತದೆ. ಸರಿ ಈಗ ನೀವು ಮಾಡಬೇಕಾದ ಮುಂದಿನ ಕಾರ್ಯಕ್ರಮವನ್ನು ಮಾಡಿ.

**(ಅಖ್ಬರ್ ಅಲ್-ಫಜಲ್ ಇಂಟರ್ನ್ಯಾಷನಲ್ 27 ಸೆಪ್ಟೆಂಬರ್ 2022 ಗೆ ಧನ್ಯವಾದಗಳು)**

...*...*...*...

# ಖುತ್‌ಬ ಜುಮುಅ

ಜಗತ್ತಿನಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸಲು ಇಡೀ ಜಗತ್ತಿಲ್ಲಿ ದೇವನೊಬ್ಬನಿದ್ದಾನೆ ಆತನು ಇಡೀ ಜಗತ್ತಿನ ಎಲ್ಲಾ ಜನರು ಶಾಂತಿಯಿಂದ ಬದುಕಲು ಬಯಸುತ್ತಾನೆ ಎಂಬ ಈ ನಂಬಿಕೆ ಮತ್ತು ಅದನ್ನು ಅನುಸರಿಸುವುದು ಪರಿಣಾಮಕಾರಿಯಾಗಿರುತ್ತದೆ. ಸರ್ವಶಕ್ತನಾದ ಅಲ್ಲಾಹನು ಶಾಂತಿಯನ್ನು ನೀಡುವವನು ಎಂಬ ಈ ನಂಬಿಕೆಯು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮೂಲಕ ಇಸ್ಲಾಂನಿಂದ ಮಾತ್ರ ಪ್ರಸ್ತುತಪಡಿಸಲ್ಪಟ್ಟಿದೆ.

"ಓ ಯುರೋಪ್! ನೀನು ಶಾಂತಿಯಲ್ಲಿಲ್ಲ ಮತ್ತು ಓ ಏಷ್ಯಾ! ನೀನು ಸುರಕ್ಷಿತವಾಗಿಲ್ಲ ಮತ್ತು ಓ ದ್ವೀಪಗಳ ನಿವಾಸಿಗಳೇ! ಯಾವುದೇ ಕೃತಕ ದೇವರು ನಿಮಗೆ ಸಹಾಯ ಮಾಡುವುದಿಲ್ಲ. ನಾನು ನಗರಗಳು ಕುಸಿಯುತ್ತಿರುವುದನ್ನು ನೋಡುತ್ತಿದ್ದೇನೆ ಮತ್ತು ಹಳ್ಳಿಗಳು ನಿರ್ಜನವಾಗಿರುವುದನ್ನು ನೋಡುತ್ತಿದ್ದೇನೆ."

ಅಂತಹ ಪರಿಸ್ಥಿತಿಯಲ್ಲಿ, ಭರವಸೆಯ ಕಿರಣವಿದ್ದರೆ, ಶಾಂತಿಯ ಭರವಸೆ ಇದ್ದರೆ, ಶಾಂತಿ ಮತ್ತು ಸುರಕ್ಷತೆಯ ಬೋಧನೆಯೊಂದಿಗೆ ಸರ್ವಶಕ್ತನಾದ ಅಲ್ಲಾಹನಿಂದ ಜಗತ್ತಿಗೆ ಕಳುಹಿಸಲ್ಪಟ್ಟ ಏಕೈಕ ಜೀವಿ, ಅವರು ಶಾಂತಿಯ ಚಕ್ರವರ್ತಿ, ಅವರು ಎಲ್ಲಾ ಮಾನವರಿಗಿಂತ ಸರ್ವಶಕ್ತನಾದ ಅಲ್ಲಾಹನಿಗೆ ಪ್ರಿಯರು. ಅವರ ಮೇಲೆ ಅಲ್ಲಾಹನ ಕೊನೆಯ ಪರಿಪೂರ್ಣ ಮತ್ತು ಸಂಪೂರ್ಣ ಶರೀಯ್ಯತ್ ಅವತರಿಸಿತು, ಅವರ ಬೋಧನೆಯು ಪ್ರೀತಿಯ ಬೋಧನೆಯಾಗಿದೆ

ವೈಯಕ್ತಿಕ, ಕುಟುಂಬ, ಜನಾಂಗೀಯ, ರಾಷ್ಟ್ರೀಯ ಮತ್ತು ದೇಶದ ಆದ್ಯತೆಗಳ ಮೇಲೆ ಕೇಂದ್ರ ಅಕ್ಷವನ್ನು ಸಾಧಿಸಲು ಅದನ್ನು ಸ್ಥಾಪಿಸಲು ಪ್ರಯತ್ನಿಸಿದರೆ ಮಾತ್ರ ನಿಜವಾದ ಶಾಂತಿ ಇರುತ್ತದೆ. ಮತ್ತು ಒಬ್ಬ ವ್ಯಕ್ತಿಯು ನನಗೆ ಶಾಂತಿಯನ್ನು ಬಯಸದೆ ನನ್ನ ಮನೆ ಮತ್ತು ದೇಶವಾದ ಇಡೀ ಜಗತ್ತಿಗೆ ಶಾಂತಿಯನ್ನು ಬಯಸುವ ಉನ್ನತ ಅಸ್ತಿತ್ವವು (ಸರ್ವಶಕ್ತನಾದ ಅಲ್ಲಾಹನು) ನನ್ನ ಮೇಲಿದೆ ಅದು ನನಗೆ ಮಾತ್ರ ಶಾಂತಿಯನ್ನು ಬಯಸುವುದಿಲ್ಲ ಬದಲಿಗೆ ಇಡೀ ಪ್ರಪಂಚಕ್ಕಾಗಿ ಶಾಂತಿಯನ್ನು ಬಯಸುತ್ತದೆ ಎಂದು ಅರ್ಥಮಾಡಿಕೊಂಡಾಗ ಮಾತ್ರ ಇದು ಸಂಭವಿಸುತ್ತದೆ.

ಹೀಗೆ ಸರ್ವಶಕ್ತನಾದ ಅಲ್ಲಾಹನು ತನ್ನ ಪ್ರಕಾಶವನ್ನು, ಅದು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಆಗಿದ್ದಾರೆ ಮತ್ತು ಪ್ರಕಾಶಮಾನವಾದ ಗ್ರಂಥವಾದ ಪವಿತ್ರ ಖುರ್‌ಆನ್ ಅದು ಸರ್ವಜ್ಞಾನಗಳ ಚೆಲುಮೆಯಾಗಿದೆ ಮತ್ತು ಮಾರ್ಗದರ್ಶನದ ಪ್ರಕಾಶವಾಗಿದೆ ಮತ್ತು ಶಾಂತಿಯ ಸಂದೇಶ ಅದರಲ್ಲಿದೆ ಅದನ್ನು ಕಳುಹಿಸುವ ಮೂಲಕ ಮಾನವೀಯತೆಗೆ ದೊಡ್ಡ ಉಪಕಾರವನ್ನು ಮಾಡಿದ್ದಾನೆ. ಮನುಷ್ಯನು ಅದರ ಲಾಭವನ್ನು ಪಡೆಯದೆ ತನ್ನ ವಿನಾಶಕಾರಿ ಸ್ವಾರ್ಥಿ ಹಿತಾಸಕ್ತಿಗಳಿಗೆ ಬಂಧಿಯಾಗಿ ಉಳಿದಿದ್ದರೆ, ಇದಕ್ಕಿಂತ ಹೆಚ್ಚು ದುರದೃಷ್ಟಕರ ವಿಷಯ ಏನಿದೆ?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವಿಶ್ವಾಸಿಗಳಿಗೆ ಇದು ಮಹತ್ತರವಾದ ಕಾರ್ಯವಾಗಿದೆ. ಅವರು ತಮ್ಮ ಮನೆಗಳಲ್ಲಿ ಮತ್ತು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶಾಂತಿ ಮತ್ತು ಭದ್ರತೆಯನ್ನು ಸೃಷ್ಟಿಸಬೇಕು ಮತ್ತು ಜಗತ್ತಿನಲ್ಲಿ ಶಾಂತಿ ಮತ್ತು ಭದ್ರತೆಯನ್ನು ಸೃಷ್ಟಿಸಬೇಕು.

ಆದ್ದರಿಂದ ಇಂದು ಈ ಬೋಧನೆಯನ್ನು ತಮ್ಮ ಜೀವನದ ಒಂದು ಭಾಗವಾಗಿಸುವುದು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ನಿಜವಾದ ಗುಲಾಮರ ಅನುಯಾಯಿಗಳ ಕಾರ್ಯವಾಗಿದೆ. ನೀವು ಪವಿತ್ರ ಖುರ್‌ಆನ್‌ನ ಆದೇಶಗಳನ್ನು ಅನುಸರಿಸಿದರೆ, ನಿಮ್ಮ ಪರಿಸರದಲ್ಲಿ ನೀವು ಭದ್ರತೆಯನ್ನು ರಚಿಸಬಹುದು ಮತ್ತು ಜಗತ್ತಿಗೆ ಭದ್ರತೆಯ ಸಂದೇಶವನ್ನು ರವಾನಿಸಬಹುದು.

**ಜಲ್ಸ ಸಾಲಾನ ಜರ್ಮನಿ 2022ರ ಮುಕ್ತಾಯ ಸಮಾರಂಭದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್(ಅತಬಿಅ) ರವರ ವಿಶ್ವಾಸ ವರ್ಧಕ ಹಾಗೂ ಮನಃ ಸೆಳೆಯುವ ಉಪನ್ಯಾಸ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಐವಾನೆ ಮಸ್ರೂರ್'** ನಿಂದ **21-08-2022** ರಂದು ನೀಡಿದ **ವಿಶ್ವಾಸ ವರ್ಧಕ ಉಪನ್ಯಾಸ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ ـ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಅಹ್ಮದೀಯ ಜಮಾಅತ್ ಜರ್ಮನಿಗೆ ಇಂದು ತನ್ನ ಜಲ್ಸ ಸಾಲಾನವನ್ನು (ವಾರ್ಷಿಕ ಸಮ್ಮೇಳನ) ಆಯೋಜಿಸಲು ಸೌಭಾಗ್ಯ ಲಭಿಸಿದೆ. ಮತ್ತು ನೀವು ಕಳೆದ ವರ್ಷಕ್ಕಿಂತ ಹೆಚ್ಚು ವಿಸ್ತಾರವಾದ ವ್ಯವಸ್ಥೆಗಳೊಂದಿಗೆ ಈ ಜಲ್ಸವನ್ನು ಆಯೋಜಿಸುತ್ತಿದ್ದೀರಿ. ಮೊದಲನೆಯದಾಗಿ, ಕೋವಿಡ್ ಸಾಂಕ್ರಾಮಿಕವು ಜಗತ್ತನ್ನು ಚಿಂತೆಗೀಡು ಮಾಡಿದೆ ಮತ್ತು ಸಾಂಕ್ರಾಮಿಕದ ಸಮಸ್ಯೆ ಕೊನೆಗೊಂಡಿಲ್ಲ, ಈಗ ಜಗತ್ತಿನಲ್ಲಿ ಯುದ್ಧಗಳ ಪರಿಸ್ಥಿತಿಯು ಜಗತ್ತನ್ನು ಅತ್ಯಂತ ಅಪಾಯಕಾರಿ ಹಂತಕ್ಕೆ ತಂದಿದೆ. ಪ್ರಪಂಚದ ಯಾವುದೇ ಪ್ರದೇಶವು ಈ ಸನ್ನಿಹಿತ ವಿಪತ್ತಿನಿಂದ ಸುರಕ್ಷಿತವಾಗಿ ಕಾಣುವುದಿಲ್ಲ ಮತ್ತು ಏಕದೇವನ ಕಡೆಗೆ ತಿರುಗದಿದ್ದರೆ ವಿಪತ್ತಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಮೊದಲಿಗೆ ಯುರೋಪ್ ಮತ್ತು ಪಾಶ್ಚಿಮಾತ್ಯ ದೇಶಗಳು ಮತ್ತು ಅಭಿವೃದ್ಧಿ ಹೊಂದಿದ ದೇಶಗಳು ಯುದ್ಧಗಳ ಪರಿಸ್ಥಿತಿ, ಗಲಭೆಗಳ ಪರಿಸ್ಥಿತಿ, ಅವು ಹುಟ್ಟಿದ ಅಥವಾ ನಡೆಯುತ್ತಿರುವ ಪ್ರದೇಶಗಳು ಮತ್ತು ದೇಶಗಳ ನಾಶದ ಪರಿಸ್ಥಿತಿಗಳು ನಮ್ಮಿಂದ ಸಾವಿರಾರು ಮೈಲುಗಳಷ್ಟು ದೂರದಲ್ಲಿವೆ ಮತ್ತು ನಾವು ಸುರಕ್ಷಿತರಾಗಿದ್ದೇವೆ ಎಂಬ ನಂಬಿಕೆಯಲ್ಲಿ ಕುಳಿತಿದ್ದವು. ಪರಿಸ್ಥಿತಿಗಳು ಕೆಟ್ಟದಾಗಿವೆ, ಬಾಂಬ್‌ಗಳು ಬೀಳುತ್ತಿವೆ, ಜನರು ಸಾಯುತ್ತಿದ್ದಾರೆ, ಮಹಿಳೆಯರು ವಿಧವೆಯರಾಗುತ್ತಿದ್ದಾರೆ, ಮಕ್ಕಳು ಅನಾಥರಾಗುತ್ತಿದ್ದಾರೆ, ಜನರು ಅಂಗವಿಕಲರಾಗುತ್ತಿದ್ದಾರೆ, ಆದ್ದರಿಂದ ಅವು ಏಷ್ಯಾದಲ್ಲಿ ಮತ್ತು ಮಧ್ಯಪ್ರಾಚ್ಯದಲ್ಲಿ ಮತ್ತು ಬಡ ದೇಶಗಳಲ್ಲಿ ನಡೆಯುತ್ತಿವೆ, ನಮಗೆ ಇದರಿಂದ ಯಾವ ಸಂಬಂಧವಿದೆ? ಅಭಿವೃದ್ಧಿ ಹೊಂದಿದ ದೇಶಗಳು ಈ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಲೇ ಇತ್ತು ಇದರಿಂದ ನಮ್ಮ ಶಸ್ತ್ರಾಸ್ತ್ರಗಳು ಮಾರಾಟವಾಗುತ್ತಲೇ ಇರಲಿ ಎಂದು. ಇವರು ಸತ್ತರೆ ಸಾಯಿಲಿ ಅದರಿಂದ ನಮಗೇನು? ಆದರೆ ಈ ಪರಿಸ್ಥಿತಿಗಳು ತಮಗೂ ಬರಬಹುದೆಂಬುದನ್ನು ಅವರು ಮರೆತರು ಮತ್ತು ಅವರ ಪ್ರಗತಿಯ ಅನ್ವೇಷಣೆಯಲ್ಲಿ ಅವರ ಬುದ್ಧಿಯೂ ಮಂದಾಗಿತ್ತು ಮತ್ತು ಅವರ ಕಣ್ಣುಗಳು ಕುರುಡಾಗಿದ್ದವು, ಮತ್ತು ಈಗ ಯಾವ ವಿಷಯದ ಕುರಿತು ಭಯವಿತ್ತೊ ಅದನ್ನು ಈಗ ಇಡೀ ಜಗತ್ತು ನೋಡುತ್ತಿದೆ ಮತ್ತು ಯುರೋಪಿನಲ್ಲಿ ಯುದ್ಧದ ಪರಿಸ್ಥಿತಿಗಳು ಉದ್ಭವಿಸುತ್ತಿವೆ.

ಯುಕ್ರೇನ್‌ನಿಂದಾಗಿ ರಷ್ಯಾ ಮತ್ತು ನ್ಯಾಟೋ ದೇಶಗಳು ಮುಖಾಮುಖಿಯಾಗಿ ನಿಂತಿವೆ. ಅಂತಿಮವಾಗಿ ಯಾರು ಮೇಲುಗೈ ಸಾಧಿಸುತ್ತಾರೆ ಅಥವಾ ಎರಡೂ ಕಡೆಯವರಿಗೆ ಎಷ್ಟು ನಷ್ಟ ಉಂಟಾಗುತ್ತದೆ ಎಂಬುದು ಸರ್ವಶಕ್ತನಾದ ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ, ಆದರೆ ಇದರ

ಪರಿಣಾಮಗಳು ತುಂಬಾ ಅಪಾಯಕಾರಿ ಮತ್ತು ಇನ್ನೂ ಬುದ್ಧಿವಂತಿಕೆಯಿಂದ ವರ್ತಿಸದಿದ್ದರೆ, ಭಯಾನಕ ದುರಂತವು ಕೊನೆಗೊಳ್ಳುತ್ತದೆ.

ಮತ್ತೆ ಈಗ ಥೈವಾನ್ ವಿಷಯವನ್ನೂ ಎತ್ತಿರುವುದನ್ನು ನಾವು ನೋಡುತ್ತಿದ್ದೇವೆ ಮತ್ತು ಇಡೀ ಜಗತ್ತು ಈಗ ಭಯಾನಕ ಯುದ್ಧದ ಅಂಚಿನಲ್ಲಿದೆ ಎಂಬುದು ಸ್ಪಷ್ಟವಾಗಿದೆ. ಪ್ರಸ್ತುತ ಕಾಲದಲ್ಲಿ ಸರ್ವಶಕ್ತನಾದ ಅಲ್ಲಾಹನ ಸುಧಾರಕರು ಬಹಳ ಸ್ಪಷ್ಟವಾಗಿ ಎಚ್ಚರಿಕೆ ನೀಡಿದ್ದಾರೆ ಅದೇನೆಂದರೆ "ಓ ಯುರೋಪ್! ನೀನು ಶಾಂತಿಯಲ್ಲಿಲ್ಲ ಮತ್ತು ಓ ಏಷ್ಯಾ! ನೀನು ಸುರಕ್ಷಿತವಾಗಿಲ್ಲ ಮತ್ತು ಓ ದ್ವೀಪಗಳ ನಿವಾಸಿಗಳೇ! ಯಾವುದೇ ಕೃತಕ ದೇವರು ನಿಮಗೆ ಸಹಾಯ ಮಾಡುವುದಿಲ್ಲ. ನಾನು ನಗರಗಳು ಕುಸಿಯುತ್ತಿರುವುದನ್ನು ನೋಡುತ್ತಿದ್ದೇನೆ ಮತ್ತು ಹಳ್ಳಿಗಳು ನಿರ್ಜನವಾಗಿರುವುದನ್ನು ನೋಡುತ್ತಿದ್ದೇನೆ." (ಹಖೀಖತುಲ್ ವಹೀ, ರೂಹಾನಿ ಖಝಾಇನ್, ಸಂಪುಟ-22, ಪುಟ-269)

ಇದು ಸ್ಪಷ್ಟವಾದ ಅಧ್ಯಾಪನೆ ಹಾಗೂ ಎಚ್ಚರಿಕೆಯ ಕಾರಣದಿಂದಾಗಿ ಅಹ್ಮದಿಯಾ ಜಮಾಅತ್‌ನ ಖಲೀಫರು ಕಾಲಕಾಲಕ್ಕೆ ಗಮನವನ್ನು ಸೆಳೆಯುತ್ತಿದ್ದರು. ನಾನೂ ಕೂಡ ಈ ಬಗ್ಗೆ ಬಹಳ ದಿನಗಳಿಂದ ಗಮನ ಸೆಳೆಯುತ್ತಾ ಬಂದಿದ್ದೇನೆ, ಯಾರು ತನಗೆ ಸೃಷ್ಟಿಸಿದ ಏಕದೇವನ ಕಡೆಗೆ ಗಮನಹರಿಸದಿದ್ದರೆ ವಿನಾಶ ಖಚಿತವಾಗಿದೆ.

ಬ್ಲಾಕ್‌ಗಳು ರಚನೆಯಾಗುತ್ತಿವೆ ಮತ್ತು ಅದರ ಅಂತಿಮ ಫಲಿತಾಂಶವು ಪರಸ್ಪರ ವಿನಾಶವಾಗಿದೆ ಎಂದು ನಾನು ಬಹಳ ಸಮಯದಿಂದ ಹೇಳುತ್ತಿದ್ದೇನೆ, ಆದ್ದರಿಂದ ಜಾಗೃತರಾಗಿರಿ, ಆದರೆ ಆಗಾಗ್ಗೆ ಈ ಜನರು ಈ ವಿಷಯಗಳನ್ನು ಕೇಳುತ್ತಾರೆ, ಕೇಳುತ್ತಿದ್ದರು ಮತ್ತು ಈಗಲೂ ಕೇಳಿ ಪರಿಸ್ಥಿತಿಯು ಸ್ವಲ್ಪ ಹಾಳಾಗಿದೆ ಎಂದು ಹೇಳುತ್ತಾರೆ. ಹೌದು, ಪರಿಸ್ಥಿತಿಗಳು ಸ್ವಲ್ಪ ಹಾಳಾಗಿದೆ ಆದರೆ ನೀವು ಭೀಕರ ಮತ್ತು ಹತಾಶ ಪರಿಸ್ಥಿತಿಗಳ ಚಿತ್ರವನ್ನು ಚಿತ್ರಿಸುತ್ತಿರುವಂತೆ ಅಲ್ಲ. ಜನ ನನಗೂ ಸಹ ಹೇಳಿದರು, ಜನ ನಮ್ಮದೇ ಜಮಾಅತ್‌ನವರಿಗೂ ಹೇಳಿದರು, ಆದರೆ ಈಗ ಈ ವಿಷಯಗಳನ್ನು ಮೇಲ್ನೋಟದಿಂದ ನೋಡುತ್ತಿದ್ದ ಇದೇ ಜನರು ಪರಿಸ್ಥಿತಿ ಹದಗೆಡುತ್ತಿದೆ ಎಂದು ಸ್ವತಃ ಹೇಳಲು ಪ್ರಾರಂಭಿಸಿದ್ದಾರೆ. ಪರಿಸ್ಥಿತಿಯೂ ಹೀಗೆ ಮುಂದುವರಿದರೆ ಯಾವುದೇ ಸಮದಲ್ಲಿಯೂ ಭಯಾನಕ ಯುದ್ಧದ ಒಂದು ರೂಪವಾಗಬಹುದು.

ಈಗ ಅವರ ಥಿಂಕ್ ಟ್ಯಾಂಕ್‌ಗಳು ಮತ್ತು ವಿಶ್ಲೇಷಕರು ಈ ವಿಷಯಗಳನ್ನು ಹೇಳಲು ಪ್ರಾರಂಭಿಸಿದ್ದಾರೆ, ಆದರೆ ಇದರ ಹೊರತಾಗಿಯೂ ಸುಸ್ಥಿರ ಶಾಂತಿಯನ್ನು ಸ್ಥಾಪಿಸಲು ಅವರ ಬಳಿ ಪರಿಹಾರವಿಲ್ಲ ಮತ್ತು ಅವರು ಶಾಂತಿಯ ಮೂಲದ ಕಡೆಗೆ ನೋಡದಿರುವುದು ಹೇಗೆ. ಪ್ರಪಂಚದಲ್ಲಿ ಮುಳುಗಿ ಧರ್ಮವನ್ನು ಮರೆತು ಹೋಗಿದ್ದಾರೆ.

ಶಾಂತಿಯೇ ಪರಿಹಾರವಿದ್ದ ಕಡೆಗೆ ಈ ಮುಸ್ಲಿಮೇತರ ಸರ್ಕಾರಗಳು ಬರಲು ಬಯಸುವುದಿಲ್ಲ ಅಥವಾ ದುರದೃಷ್ಟವಶಾತ್ ಮುಸ್ಲಿಂ ಸರ್ಕಾರಗಳು ಸಹ ಬರಲು ಬಯಸುವುದಿಲ್ಲ.

ಈಗ ಕೆಲವು ಸ್ಥಳಗಳಲ್ಲಿ, ವಿಶ್ಲೇಷಕರು ಯುದ್ಧಗಳ ಸಂದರ್ಭದಲ್ಲಿ ಉಂಟಾಗುವ ವಿನಾಶವು ಎಷ್ಟು ಭಯಾನಕವಾಗಿದೆಯೆಂದರೆ, ಒಂದು ಅಂದಾಜಿನ ಪ್ರಕಾರ, ಅಣ್ವಸ್ತ್ರಗಳ ಬಳಕೆಯಿಂದಾಗಿ ಪ್ರಪಂಚದ ಅರವತ್ತಾರು ಪ್ರತಿಶತದಷ್ಟು ನಾಶವಾಗುತ್ತದೆ ಎಂದು ಹೇಳುತ್ತಿದ್ದಾರೆ. ಯುದ್ಧ ಮತ್ತು ಅದರ ನಂತರದ ಎರಡು ವರ್ಷಗಳಲ್ಲಿ ಜನಸಂಖ್ಯೆಯು ನಾಶವಾಗುತ್ತದೆ. ಯಾರೂ ಊಹಿಸಲೂ ಸಾಧ್ಯವಾಗದಂತಹ ನಷ್ಟ ಮತ್ತು ವಿನಾಶ ಇರುತ್ತದೆ. ಒಬ್ಬ ಸಾಮಾನ್ಯ ವ್ಯಕ್ತಿಗೆ ಅದರ ಬಗ್ಗೆ ಯೋಚಿಸಲೂ ಸಾಧ್ಯವಿಲ್ಲ. ಹಾಗಾಗಿ ತುಂಬಾ ಭಯಾನಕ ಸನ್ನಿವೇಶಗಳಿವೆ.

ಅಂತಹ ಪರಿಸ್ಥಿತಿಯಲ್ಲಿ, ಭರವಸೆಯ ಕಿರಣವಿದ್ದರೆ, ಶಾಂತಿಯ ಭರವಸೆ ಇದ್ದರೆ, ಶಾಂತಿ ಮತ್ತು ಸುರಕ್ಷತೆಯ ಬೋಧನೆಯೊಂದಿಗೆ ಸರ್ವಶಕ್ತನಾದ ಅಲ್ಲಾಹನಿಂದ ಜಗತ್ತಿಗೆ ಕಳುಹಿಸಲ್ಪಟ್ಟ ಏಕೈಕ ಜೀವಿ, ಅವರು ಶಾಂತಿಯ ಚಕ್ರವರ್ತಿ, ಅವರು ಎಲ್ಲಾ ಮಾನವರಿಗಿಂತ ಸರ್ವಶಕ್ತನಾದ ಅಲ್ಲಾಹನಿಗೆ ಪ್ರಿಯರು. ಅವರ ಮೇಲೆ ಅಲ್ಲಾಹನ ಕೊನೆಯ ಪರಿಪೂರ್ಣ ಮತ್ತು ಸಂಪೂರ್ಣ ಶರೀಯತ್ ಅವತರಿಸಿತು, ಅವರ ಬೋಧನೆಯು ಪ್ರೀತಿಯ ಬೋಧನೆಯಾಗಿದೆ, ಅವರ ದೇವರೊಂದಿಗಿನ ಸಂಬಂಧದ ಕಾರಣದಿಂದ ಮತ್ತು ತನ್ನ ಮೇಲೆ ಅವತರಿಸಿರುವಂತಹ ಬೋಧನೆಯನ್ನು ಪ್ರಪಂಚದಾದ್ಯಂತ ಹರಡುವ ಕಾಳಜಿಯಿಂದಾಗಿ ಮತ್ತು ಇಡೀ ಪ್ರಪಂಚವನ್ನು ವಿನಾಶದಿಂದ ಉಳಿಸುವ ಕಾಳಜಿ ಮತ್ತು ಅದಕ್ಕಾಗಿ ತೀವ್ರವಾದ ನೋವನ್ನು ಅನುಭವಿಸಿದ ಕಾರಣದಿಂದ ತನ್ನ ಸಂಪೂರ್ಣ ಜೀವವನ್ನೇ ದಣಿದರು. ಅವರು ಎಂತಹ ಸ್ಥಿತಿಯನ್ನು ತಲುಪಿದರು ಅಂದರೆ ಅವರು ದುಃಖಿಸುತ್ತ ಮತ್ತು ಅಳುತ್ತಾ, ನರಳುತ್ತಾ ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸಿದರು, ಅಲ್ಲಾಹನು ಅವರ ಪರಿಸ್ಥಿತಿಯನ್ನು ಕಂಡು ಹೀಗೆ ಹೇಳಿದನು: **ಲಅಲ್ಲಕ ಬಾಖಿಉನ್ನಫ್‌ಸಕ ಅಲ್ಲಾ ಯಕೂನು ಮುಮಿನೀನ** (ಅಶ್ಶುರಾ: 4) "ಪ್ರಾಯಶಃ ಅವರು ನೊಂಬುವುದಿಲ್ಲ ಎಂಬ ಕಾರಣದಿಂದ ನೀವು ನಿಮ್ಮ ಜೀವವನ್ನು ಹಾನಿಗೊಳಿಸುವಿಯಾ."

ಜನರು ತಮ್ಮ ಸೃಷ್ಟಿಕರ್ತನ ಕಡೆಗೆ ತಿರುಗಬೇಕು ಮತ್ತು ವಿನಾಶದಿಂದ ರಕ್ಷಿಸಬೇಕು ಎಂದು ಮಾನವೀಯತೆಯ ಬಗ್ಗೆ ತಮ್ಮ ಹೃದಯದಲ್ಲಿ ನೋವು ಹೊಂದಿದ್ದ ವ್ಯಕ್ತಿ ಇವರಾಗಿದ್ದರು. ತಮ್ಮ ಇಹಲೋಕವನ್ನು ಉಳಿಸಿಕೊಳ್ಳಿ ಮತ್ತು ಪರಲೋಕವನ್ನು ಸಹ ಉಳಿಸಿಕೊಳ್ಳಿ. ಇಂತಹ ಸಮಗ್ರ ಶಿಕ್ಷಣವನ್ನು ರಸೂಲುಲ್ಲಾಹ್(ಸ) ಅವರು ನೀಡಿದರು ಅಂದರೆ ಅದರ ಶಿಕ್ಷಣದೊಂದಿಗೆ ಬೇರೆ ಯಾವುದೇ ಶಿಕ್ಷಣವು ಸ್ಪರ್ಧಿಸಲು ಸಾಧ್ಯವಿಲ್ಲ. ನಿಜವಾಗಿಯು ಅಲ್ಲಾಹನು ನೀಡಿದ ಭರವಸೆಯಂತೆ ಶಾಂತಿಯ ಭರವಸೆಯನ್ನು ಅವರು(ಸ) ಖಾತರಿಪಡಿಸಿದರು, ಆದರೆ ಮುಸ್ಲಿಮರು ಸಹ ಈ ಬೋಧನೆಯನ್ನು ಮರೆತು ಪರಸ್ಪರರ ರಕ್ತದ ದಾಹಕ್ಕೆ ಒಳಗಾಗಿದ್ದಾರೆ ಮತ್ತು ನಂಬಿಕೆಯ ಮೌಖಿಕ ಘೋಷಣೆಗಳನ್ನು ಮಾಡುತ್ತಾರೆ ಮತ್ತು ಹೊರಗಿನವರ ಸಹಾಯವನ್ನು ಕೇಳುತ್ತಿದ್ದಾರೆ ಎಂಬುದು ವಿಷಾದದ ಸಂಗತಿಯಾಗಿದೆ.

ಕಲಿಮ ಪಠಿಸುವವನು, ಕಲಿಮ ಪಠಿಸುವವನ್ನು ಧರ್ಮ ವಿರೋಧಿಗಳ ನೆರವಿನಿಂದ ಹತ್ಯೆ ಮಾಡಲಾಗುತ್ತಿದೆ. ಮುಸಲ್ಮಾನರ ಪಾಲಿಗೆ ಇದಕ್ಕಿಂತ ದುರದೃಷ್ಟವೇನಿರಬಹುದು? ಅಂತಹ ಸುಂದರವಾದ ಬೋಧನೆ ಮತ್ತು ಅಂತಹ ನೋವು ಹೊಂದಿರುವವರು ದೇವರ ಸಂದೇಶವಾಹಕರನ್ನು ಅನುಸರಿಸುವುದಾಗಿ ಹೇಳಿಕೊಂಡರೂ, ಅಲ್ಲಾಹನ ಅಸಮಾಧಾನಕ್ಕೆ ಒಳಗಾಗುತ್ತಿದ್ದಾರೆ ಮತ್ತು ಜಗತ್ತಿನಲ್ಲಿ ಶಾಂತಿ ಮತ್ತು ಭದ್ರತೆಯನ್ನು ಹರಡುವ ಬದಲು, ಅವರು ಅಶಾಂತಿಯನ್ನು ಹರಡುವುದರಲ್ಲಿ ಪ್ರಸಿದ್ಧರಾಗುತ್ತಿದ್ದಾರೆ ಮತ್ತು ಇದಕ್ಕೆಲ್ಲ ಕಾರಣ. ಈ ಯುಗದಲ್ಲಿ ಸರ್ವಶಕ್ತನಾದ ಅಲ್ಲಾಹನು ಶಾಂತಿ ಮತ್ತು ಭದ್ರತೆಯ ರಾಜನನ್ನು ಮತ್ತು ಈ ಯುಗದಲ್ಲಿ ಸರ್ವಶಕ್ತನಾದ ಅಲ್ಲಾಹನ ಅತ್ಯಂತ ಪ್ರೀತಿಯ ಸೇವಕನನ್ನು ಜಗತ್ತಿನಲ್ಲಿ ಶಾಂತಿ ಮತ್ತು ಸುರಕ್ಷತೆಯ ಬೋಧನೆಯನ್ನು ಹರಡಲು ಕಳುಹಿಸಿದ್ದಾನೆ, ಅವರು ಆತನ ಮಾತುಗಳನ್ನು ಆಲಿಸಲು ಬಯಸುವುದಿಲ್ಲ ಮತ್ತು ಆತನ ಮಾತನ್ನು ಕೇಳಲು ಬಯಸುವುದಲ್ಲದೆ ಆತನ ಮತ್ತು ಆತನ ಅನುಯಾಯಿಗಳ ಮೇಲೆ ಅಪನಂಬಿಕೆಯ ಫತ್ವಾಗಳನ್ನು ಹೊರಡಿಸಿ ಅವರನ್ನು ಕೊಲ್ಲುವುದು ಇಸ್ಲಾಮಿನ ಶ್ರೇಷ್ಠ ಸೇವೆ ಮತ್ತು ಖಾತಮುಲ್ ಅಂಬಿಯಾ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಪ್ರೀತಿಯ ಗುಣಮಟ್ಟ ಎಂದು ಪರಿಗಣಿಸುವ ಮಟ್ಟಿಗೆ ಅವರು ಮುಂದಾಗಿದ್ದಾರೆ. ಅಹ್ಮದೀಯರ ಬದುಕಿನೊಂದಿಗೆ ಆಟವಾಡುವುದು ಅವರಿಗೆ ಉತ್ತಮ ಕಾರ್ಯವಾಗಿದೆ. ಹೀಗಿರುವಾಗ ಇಂಥವರು ಇಸ್ಲಾಂ ಧರ್ಮದ ಬೋಧನೆಗಳನ್ನು ಜಗತ್ತಿನಲ್ಲಿ ಹೇಗೆ ಹರಡುತ್ತಾರೆ? ಈ ಜನರು ಬುದ್ಧಿವಂತರಾಗಬೇಕೆಂದು ನಾನು ಬಯಸುತ್ತೇನೆ. ಕೆಟ್ಟ ವಿದ್ವಾಂಸರಾಗುವ ಬದಲು, ಅವರ ವಿದ್ವಾಂಸರು ಬುದ್ಧಿವಂತಿಕೆ ಮತ್ತು ಜ್ಞಾನವನ್ನು ಹರಡುವ ವಿದ್ವಾಂಸರಾಗಬೇಕು. ಇದರಿಂದ ಅವರು ಒಂದೇ ಉಮ್ಮತ್‌ನವರು ಆಗಬಹುದು ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ಬೋಧನೆಗಳನ್ನು ಜಗತ್ತಿನಲ್ಲಿ ಹರಡಬಹುದು ಮತ್ತು ಪ್ರವಾದಿ ಮುಹಮ್ಮದ್(ಸ) ಅವರ ನೀತಿವಂತ ಸೇವಕರೊಂದಿಗೆ ಒಟ್ಟಾಗಿ ಜಗತ್ತಿಗೆ ನಿಜವಾದ ಶಾಂತಿ ಮತ್ತು ಭದ್ರತೆಯ ಸಂದೇಶವನ್ನು ತಲುಪಿಸಬಹುದು.

ಆದಾಗ್ಯೂ, ಇದು ಪ್ರತ್ಯೇಕ ಮತ್ತು ವಿವರವಾದ ವಿಷಯವಾಗಿದೆ.

ಈ ಸಮಯದಲ್ಲಿ, ನಾನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಬೋಧನೆಗಳು, ಅವರಿಗೆ ಅವತರಿಸಿದ ಶರಿಯಾ ಮತ್ತು ಶಾಂತಿ ಮತ್ತು ಭದ್ರತೆಯನ್ನು ಹರಡುವ ಅವರ ಬೋಧನೆಗಳ ಬಗ್ಗೆ ಪ್ರಪಂಚದ ಶಾಂತಿಯ ಬಗ್ಗೆ ಮಾತನಾಡುತ್ತೇನೆ.

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಬೋಧನೆಗಳು ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮಾದರಿಯೂ ಎಷ್ಟು ವಿಸ್ತಾರವಾಗಿವೆ ಎಂದರೆ ಅವುಗಳನ್ನು ಇಷ್ಟು ಕಡಿಮೆ ಸಮಯದಲ್ಲಿ ವಿವರಿಸಲು ಸಾಧ್ಯವಿಲ್ಲ, ಆದರೆ ಹೇಗಾದರೂ, ನಾನು ಹೇಳಿದಂತೆ, ನಾನು ಕೆಲವು ವಿಷಯಗಳನ್ನು ವಿವರಿಸುತ್ತೇನೆ.

ಅಹ್ಮದಿಯಾ ಜಮಾಅತ್‌ನ ಬಗ್ಗೆ ಹೇಳಲಾಗುತ್ತದೆ, 'ನೌಝುಬಿಲ್ಲಾಹ್' ನಾವು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ನಿಂದಿಸಿ ಮತ್ತು ಅವಮಾನಿಸುವುದರಲ್ಲಿ ತಪ್ಪಿತಸ್ಥರಾಗಿದ್ದೇವೆ ಮತ್ತು ನಾವು ಅದನ್ನೆ ಬೋಧಿಸುತ್ತೇವೆ, ಆದರೆ ವಾಸ್ತವದಲ್ಲಿ ನಾವು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಬೋಧನೆಗಳನ್ನು ಅನುಸರಿಸುವವರಾಗಿದ್ದೇವೆ ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಪ್ರೀತಿಸುವವರಾಗಿದ್ದೇವೆ. ಇದಕ್ಕೆ ಜಮಾಅತ್‌ನ ಸಾಹಿತ್ಯವೇ ಸಾಕ್ಷಿಯಾಗಿದೆ. ಪ್ರತಿ ವರ್ಷ ಸಾವಿರಾರು ಶುದ್ಧಜೀವಿಗಳು (ಸಯೀದ್-ಎ-ಫಿತರ್) ಈ ಬೋಧನೆ ಮತ್ತು ಪ್ರೀತಿಯನ್ನು ನೋಡಿದ ನಂತರ ಅಹ್ಮದಿಯಾ ಮುಸ್ಲಿಂ ಜಮಾಅತ್ತಿಗೆ ಸೇರುತ್ತಾರೆ. ಇಸ್ಲಾಂ ಧರ್ಮದ ಈ ಬೋಧನೆಯು ಎಷ್ಟು ಪರಿಣಾಮಕಾರಿ ಮತ್ತು ಪ್ರೀತಿ ಮತ್ತು ಶಾಂತಿಯ ಬೋಧನೆಯಾಗಿದೆ

ಮತ್ತು ಇಂದು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಇದು ಏಕೈಕ ಪರಿಹಾರವಾಗಿದೆ ಎಂದು ಇತರರು ಹೇಳುತ್ತಾರೆ.

ಕೆಲವು ದಿನಗಳ ಮುಂಚೆ ನಾನು ಯು.ಕೆ ಜಲ್ಸಾ ಸಾಲಾನದಲ್ಲಿ ಜಮಾಅತ್‌ನ ಪ್ರಗತಿಯ ವರದಿಯಲ್ಲಿ ಮತ್ತು ಜಲ್ಸದ ಅನಿಸಿಕೆಗಳ ಘಟನೆಗಳಲ್ಲಿ ಜನರ ಅಭಿಪ್ರಾಯಗಳನ್ನು ತಿಳಿಸಿದ್ದೆ ಜನರು ಹೇಗೆ ಅಹ್ಮದಿ ಪರಿಸರದಿಂದ ಮತ್ತು ಜಲ್ಸಾದ ವಾತಾವರಣದಿಂದ ಪ್ರಭಾವಿತರಾದರು ಮತ್ತು ಇಸ್ಲಾಮ್ ಧರ್ಮದ ಶಾಂತಿಯುತ ಬೋಧನೆಗಳಿಂದ ಅವರು ಹೇಗೆ ಪ್ರೇರಿತರಾದರು ಎಂಬುದರ ಕುರಿತು ಪ್ರಸ್ತಾಪಿಸಿದೆ. ಏನೇ ಇರಲಿ, ನಮ್ಮ ವಿರೋಧಿಗಳು ಏನೇ ಯೋಚಿಸಲಿ ಮತ್ತು ಮಾಡಿದರೂ, ನಾವು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ನಿಜವಾಗಿಯೂ ಪ್ರೀತಿಸುತ್ತಿದ್ದರೆ, ನಾವು ಅವರ ಬೋಧನೆಗಳನ್ನು ಅನುಸರಿಸಿಕೊಂಡು ಜಗತ್ತಿನಲ್ಲಿ ಹರಡುವುದು ನಮ್ಮ ಕರ್ತವ್ಯವಾಗಿದೆ. ಇಂದು ಜಗತ್ತಿನಲ್ಲಿ ಶಾಂತಿ ಮತ್ತು ಭದ್ರತೆಗೆ ಇದೊಂದೇ ಒಂದು ಪರಿಹಾರವಾಗಿದೆ ಎಂದು ಜಗತ್ತಿಗೆ ತಿಳಿಸಿ. ಆದ್ದರಿಂದ, ಶಾಂತಿ ಮತ್ತು ಸುರಕ್ಷತೆಯನ್ನು ಬೋಧಿಸುವ ಈ ಮಹಾನ್ ಜೀವಿಯೊಂದಿಗೆ ಬನ್ನಿ ಮತ್ತು ಸಂಪರ್ಕ ಸಾಧಿಸಿ ಮತ್ತು ಇಹಲೋಕ ಮತ್ತು ಪರಲೋಕದಲ್ಲಿ ನಿಮ್ಮ ಸುರಕ್ಷತೆಯನ್ನು ಭದ್ರಪಡಿಸಿಕೊಳ್ಳಿ. ಇವು ಕೇವಲ ಪದಗಳಲ್ಲ, ಆದರೆ ನಾವು ಇತಿಹಾಸವನ್ನು ನೋಡಿದಾಗ, ಈ ಪ್ರವಾದಿಯು ಅಶಿಕ್ಷಿತ ಮತ್ತು ಅಜ್ಞಾನಿ ಅರಬ್ಬರನ್ನು ಅಜ್ಞಾನದ ಕತ್ತಲೆಯಿಂದ ಉನ್ನತ ನೈತಿಕ ಮತ್ತು ಜ್ಞಾನದ ಗೋಪುರಗಳಿಗೆ ಹೇಗೆ ಕರೆತಂದರು ಎಂಬುದನ್ನು ನಾವು ನೋಡುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಅನಾಗರಿಕರನ್ನು ಮಾನವರನ್ನಾಗಿ ಮತ್ತು ಮಾನವನಿಂದ ನೈತಿಕ ಮಾನವರನ್ನಾಗಿ ಮಾಡಿದ ಅದೇ ಸಂದೇಶವಾಹಕರಾಗಿದ್ದಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಅವರು ನಿಜವಾದ ಮತ್ತು ನಿಕಟವಾದ ನೈತಿಕತೆಯ ಕೇಂದ್ರವನ್ನು ಸಮತೋಲನವಗಿ ಸ್ಥಾಪಿಸಿದರು ಮತ್ತು ನಂತರ ನೈತಿಕ ವ್ಯಕ್ತಿಯನ್ನು ದೈವಪುರುಷವಾಗುವ ದೈವಿಕ ಬಣ್ಣದಿಂದ ಬಣ್ಣಿಸಿದರು."

(ಮಜ್‌ಮೂಅ ಇಶ್ತಿಹಾರಾತ್, ಸಂಪುಟ–2, ಪುಟ–183, ನಝಾರತ್ ನಶ್ರೊ ಇಶಾಅತ್ ಖಾದಿಯಾನ್ 2019)

ಆದ್ದರಿಂದ ಅವರು ತಮ್ಮ ಅನುಯಾಯಿಗಳಿಗೆ ಮತ್ತು ಅವರನ್ನು ಪ್ರೀತಿಸುವವರಿಗೆ ಆ ನಡವಳಿಕೆ ಮತ್ತು ಆರಾಧನೆಯ ನಿಯಮಗಳನ್ನು ಕಲಿಸಿಕೊಟ್ಟರು, ಅದು ಅವರನ್ನು ಸರ್ವಶಕ್ತನಾದ ಅಲ್ಲಾಹನಿಗೆ ಸಾಮಿಪ್ಯಗೊಳಿಸುವಂತೆ ಮಾಡಿತು ಮತ್ತು ಅವರ ಪ್ರತಿಯೊಂದು ಮಾತು ಮತ್ತು ಕಾರ್ಯವು ಸರ್ವಶಕ್ತನಾದ ಅಲ್ಲಾಹನ ಸಂಪ್ರೀತಿಗಾಗಿ ಇತ್ತು. ಅವರು ಸರ್ವಶಕ್ತನಾದ ಅಲ್ಲಾಹನಿಗೆ ಸಮೀಪಿಸಲು ದಾಸರ ಹಕ್ಕುಗಳನ್ನು ಸಹ ಪಾವತಿಸಿದರು. ಆದ್ದರಿಂದ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ನಿಷ್ಠೆಯಿಂದ ಮನಸ್ಸಿನಿಂದ ಅನುಸರಿಸುವುದು ಒಬ್ಬ ವ್ಯಕ್ತಿಯನ್ನು ಅವನು ಸರ್ವಶಕ್ತನಾದ ಅಲ್ಲಾಹನ ನಿಜವಾದ ಪ್ರೇಮಿಯಾಗುವ ಹಂತಕ್ಕೆ ಕೊಂಡೊಯ್ಯುತ್ತದೆ ಮತ್ತು ಈ ನಿಜವಾದ ಪ್ರೀತಿಯು ನಂತರ ವ್ಯಕ್ತಿಯ ಪ್ರತಿಯೊಂದು ಮಾತು ಮತ್ತು ಕಾರ್ಯವನ್ನು ಸರ್ವಶಕ್ತನಾದ ಅಲ್ಲಾಹನ ಸಂತೋಷವನ್ನು ಪಡೆಯುವಂತೆ ಮಾಡುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮ್ ನಿಷ್ಠೆಯಿಂದ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಅನುಸರಿಸುವವರ ಬಗ್ಗೆ ಹೇಳುತ್ತಾರೆ:

"ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ನಿಷ್ಠೆಯಿಂದ ಅನುಸರಿಸುವುದು ಮತ್ತು ಅವರನ್ನು ಪ್ರೀತಿಸುವುದು ಒಬ್ಬ ವ್ಯಕ್ತಿಯನ್ನು ದೇವರಿಗೆ ಪ್ರಿಯನನ್ನಾಗಿ ಮಾಡುತ್ತದೆ." (ಹಖೀಖತುಲ್ ವಹೀ, ರೂಹಾನಿ ಖಝಾಇನ್, ಸಂಪುಟ–22, ಪುಟ–67)

ಆದುದರಿಂದ ಪರಮಾತ್ಮನ ಪ್ರೀತಿಗೆ ಪಾತ್ರರಾಗುವ ರೀತಿಯಲ್ಲಿ ಬಹುದೇವತಾವಾದಿಗಳಾಗಿದ್ದವರು ಏಕದೇವರಾಧಕರನ್ನಾಗಿ ಮಾಡಿದರು ಮತ್ತು ಎಂತಹ ಏಕದೇವರಾಧಕರಾದರು ಎಂದರೆ ಅವರು ಅಲ್ಲಾಹನ ಪ್ರೀತಿಪಾತ್ರರಾದರು ಇದು ಜನರ ಹೃದಯದಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಸೃಷ್ಟಿಸಿದ ಕ್ರಾಂತಿಯಾಗಿದೆ. ಅವರು ಸರ್ವಶಕ್ತನಾದ ಅಲ್ಲಹನನ್ನು ಪ್ರೀತಿಸುವವರು ಮತ್ತು ಅಲ್ಲಾಹನು ಅವರನ್ನು ಪ್ರೀತಿಸುವವನಾದನು. ಅಲ್ಲಾಹನನ್ನು ಪ್ರೀತಿಸುವವರು ಆರಾಧನೆಯ ಹಕ್ಕನ್ನು ಸಹ ಈಡೇರಿಸಿದರು ಮತ್ತು ಅದನ್ನು ಉತ್ತಮವಾಗಿ ಈಡೇರಿಸಿದರು. ಅವರು ಸರ್ವಶಕ್ತನಾದ ಅಲ್ಲಾಹನು ನೀಡಿದ ಬೋಧನೆಯನ್ನು ಅನುಸರಿಸಲು ಪ್ರಾರಂಭಿಸಿದರು ಮತ್ತು ಅದನ್ನು ಉತ್ತಮವಾಗಿ ಅನುಸರಿಸಿದರು ಮತ್ತು ಅದರ ಮಾನದಂಡಗಳನ್ನು ಸ್ಥಾಪಿಸಿದರು.

ಒಬ್ಬ ವ್ಯಕ್ತಿ ಯಾರನ್ನಾದರೂ ಪ್ರೀತಿಸಿದಾಗ, ಒಬ್ಬ ವ್ಯಕ್ತಿಯು ಅವನ ಪ್ರತಿಯೊಂದು ಮಾತು ಮತ್ತು ಕ್ರಿಯೆಯನ್ನು ಅನುಸರಿಸಲು ಪ್ರಯತ್ನಿಸುತ್ತಾನೆ, ಅವನ ಪ್ರತಿಯೊಂದು ಮಾತನ್ನು ಆಲಿಸಿ ಆ ಮಾತುಗಳನ್ನು ಅನುಸರಿಸಲು ಪ್ರಯತ್ನಿಸುತ್ತಾನೆ.

ಮಾತಿನ ಪ್ರೀತಿಯನ್ನು ಹೇಳಿಕೊಳ್ಳುವುದಿಲ್ಲ. ಹೀಗೆ ಆ ಜನರಲ್ಲಿ ಸರ್ವಶಕ್ತನಾದ ದೇವರ ಪ್ರೀತಿಯು ಹುಟ್ಟಿಕೊಂಡಾಗ, ಸರ್ವಶಕ್ತನಾದ ಅಲ್ಲಾಹನು ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವ ಕಡೆಗೆ ಗಮನವನ್ನು ಸೃಷ್ಟಿಸಿತು. ಅವರು ಮಾನವ ಹಕ್ಕುಗಳ ಈಡೇರಿಸುವಲ್ಲಿ ಒಬ್ಬರನ್ನೊಬ್ಬರು ಮೀರಿಸಲು ಪ್ರಯತ್ನಿಸಿದರು. ಮತ್ತು ಇಂತಹ ಪರಿಸ್ಥಿತಿ ಉದ್ಭವಿಸಿದರೆ ಪರಸ್ಪರ ಪ್ರೀತಿ ಕೂಡ ಉದ್ಭವಿಸುತ್ತದೆ. ಸರ್ವಶಕ್ತನಾದ ಅಲ್ಲಹನ ಸಂತೃಪ್ತಿಯನ್ನು ಪಡೆಯಲು ಮಾನವರು ಇತರರ ಹಕ್ಕುಗಳನ್ನು ಈಡೇರಿಸುತ್ತಾರೆ ಮತ್ತು ಇದು ಒಂದು ಮಾನದಂಡವಾದಾಗ, ಶಾಂತಿ ಮತ್ತು ಭದ್ರತೆಯ ಅಡಿಪಾಯವನ್ನು ಸಹ ಹಾಕಲಾಗುತ್ತದೆ. ಅದಕ್ಕಾಗಿ ಪ್ರಯತ್ನಗಳನ್ನು ಮಾಡಲಾಗುತ್ತದೆ ಮತ್ತು ಅದರ ಮಾನದಂಡಗಳನ್ನು ಸ್ಥಾಪಿಸಲಾಗುತ್ತದೆ.

ಆದ್ದರಿಂದ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಸರ್ವಶಕ್ತನಾದ ಅಲ್ಲಾಹನನ್ನು ಭೇಟಿಯಾಗಲು ನಮಗೆ ಮಾರ್ಗವನ್ನು ತೋರಿಸಿದವರಾಗಿದ್ದಾರೆ ಮತ್ತು ಅವರು ಅವರಿಗೆ ಅವತರಿಸಿದ ಬೋಧನೆಗಳನ್ನು ಅನುಸರಿಸುವ ಮೂಲಕ ಜಗತ್ತಿನಲ್ಲಿ ಶಾಂತಿ ಮತ್ತು ಸುರಕ್ಷತೆಯನ್ನು ಸೃಷ್ಟಿಸಬಹುದು.

ಶಾಂತಿಯ ಅಡಿಪಾಯ ಮನೆಯಿಂದಲೇ ಪ್ರಾರಂಭವಾಗುತ್ತದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ನಂತರ ಅದು ಸ್ಥಳೀಯ, ಪಟ್ಟಣ, ನಗರ, ದೇಶ ಮತ್ತು ಅಂತರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸುತ್ತದೆ. ಆದ್ದರಿಂದ ಪ್ರತಿ ಹಂತದಲ್ಲೂ, ಪರಸ್ಪರರ ಭಾವನೆಗಳು ಮತ್ತು ಹಕ್ಕುಗಳ ಬಗ್ಗೆ ಕಾಳಜಿ ವಹಿಸಿದಾಗ, ಶಾಂತಿ ಸ್ಥಾಪನೆಯಾಗುತ್ತದೆ ಮತ್ತು ಇದನ್ನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮೂಲಕ ಸರ್ವಶಕ್ತನಾದ ಅಲ್ಲಾಹನು ನಮಗೆ ಕಲಿಸಿಕೊಟ್ಟಿದನು, ಅದೇ ರೀತಿ ಅವರು ಈ ಶಿಕ್ಷಣವನ್ನು ಪ್ರತಿ ವರ್ಗಕ್ಕೂ ನೀಡಿದರು.

ಹಝ್ರತ್ ಮುಸ್ಲೆಹ್ ಮೌಊದ್(ರ) ಈ ವಿಷಯವನ್ನು ವಿವಿಧ ಸಂದರ್ಭಗಳಲ್ಲಿ ವಿವರಿಸುತ್ತಿದ್ದರು, ಒಂದು ಸಂದರ್ಭದಲ್ಲಿ ಅವರು ಈ ವಿಷಯವನ್ನು ಹೀಗೆ ವಿವರಿಸಿದರು:

"ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಮತ್ತು ಪ್ರಪಂಚದ ಶಾಂತಿ"

ನಿಮ್ಮ ಈ ವಿಷಯದಿಂದ ಪ್ರಯೋಜನವನ್ನು ಪಡೆದುಕೊಂಡು, ಈ ನಿಟ್ಟಿನಲ್ಲಿ ನಾನು ವಿವರಿಸುತ್ತೇನೆ.

ನಾವು ಶಾಂತಿಯನ್ನು ಬಹಳ ಮುಖ್ಯವಾದ ವಿಷಯ ಎಂದು ನೋಡುತ್ತೇವೆ ಮತ್ತು ಅರ್ಥಮಾಡಿಕೊಳ್ಳುತ್ತೇವೆ. ಶಾಂತಿಯ ಬಗ್ಗೆ ಮಾತನಾಡುತ್ತೇವೆ, ಶಾಂತಿ ಬಹಳ ಮುಖ್ಯವಾದ ವಿಷಯ ಎಂದು ಎಲ್ಲರೂ ಹೇಳುತ್ತಾರೆ ಮತ್ತು ಶಾಂತಿಯ ಸ್ಥಿತಿಯು ಮನೆಯಲ್ಲಿ ಶಾಂತಿ ಮತ್ತು ಭದ್ರತೆಯ ಭರವಸೆಯಾಗಿದೆ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ನೆಮ್ಮದಿ ಮತ್ತು ಭದ್ರತೆಯ ಭರವಸೆಯಾಗಿದೆ ಮತ್ತು ಪ್ರತಿ ಹಂತದಲ್ಲೂ ಶಾಂತಿ ಇರಲಿ ಎಂದು ಬಯಸುತ್ತೇವೆ. ಆದರೆ ಬಯಕೆ ಮಾತ್ರ ಶಾಂತಿಯನ್ನು ಸೃಷ್ಟಿಸುವುದಿಲ್ಲ ಏಕೆಂದರೆ ಇಲ್ಲಿಯೂ ಸಹ ಶಾಂತಿಯ ಬಯಕೆ ಸ್ವಾರ್ಥವನ್ನು ಒಳಗೊಂಡಿರುತ್ತದೆ ಮತ್ತು ಇದನ್ನು ನಾವು ಜಗತ್ತಿನಲ್ಲಿ ನೋಡುತ್ತೇವೆ.

ಸ್ವಾರ್ಥವಿಲ್ಲದಿದ್ದರೆ ಜಗಳು ಯುದ್ಧಗಳು ನಡೆಯಲು ಸಾಧ್ಯವಿಲ್ಲ. ಸಾಮಾನ್ಯವಾಗಿ, ಯಾರಾದರೂ ಶಾಂತಿಯ ಬಗ್ಗೆ ಮಾತನಾಡುವಾಗ, ಶಾಂತಿಯ ಆಶಯವು ತನಗೆ ಇರುತ್ತದೆ, ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಪ್ರಾರ್ಥಿಸಿದಾಗ ಅಥವಾ ಪ್ರಾರ್ಥನೆ ಇಲ್ಲದಿದ್ದರೂ ಒಬ್ಬ ವ್ಯಕ್ತಿಯು ಹೇಳುವುದು ಅದನ್ನೇ ಅಂದರೆ, ಕೆಲವೊಮ್ಮೆ ಬಯಕೆಯ ಅಭಿವ್ಯಕ್ತಿ ಕೂಡ ಬರುತ್ತದೆ ಅಲ್ಲಾಹನು ನನ್ನನ್ನು ಮತ್ತು ನನ್ನ ಹೆಂಡತಿ ಮಕ್ಕಳನ್ನು ಮತ್ತು ನನ್ನ ಪ್ರೀತಿಪಾತ್ರರನ್ನು ಶಾಂತಿಯಿಂದ ಇಡಲಿ ಎಂದು ನಾಲಿಗೆಗೆ ಬರುತ್ತದೆ. ಬೇರೆಯವರು ಶಾಂತಿಯಿಂದ ಇರುವುದಕ್ಕೆ ಈ ನೋವಿನ ಸಂಗತಿ ಇರುವುದಿಲ್ಲ ಅಥವಾ ಒಬ್ಬ ವ್ಯಕ್ತಿಯು ತನ್ನ ಜೀವನವನ್ನು ಶಾಂತಿಯುತವಾಗಿ ಬದುಕಲು ಸಂಪತ್ತನ್ನು ಬಯಸಿದರೆ ಅದನ್ನು ತನಗಾಗಿ ಉತ್ತಮವೆಂದು ಪರಿಗಣಿಸಿದರೆ ಅದರ ಅರ್ಥ ಅವನು ಸಂಪತ್ತನ್ನು ಶತ್ರುಗಳಿಗೂ ಸಹ ಒಳ್ಳೆಯದು ಎಂದು ಪರಿಗಣಿಸುತ್ತಾನೆ ಎಂದಲ್ಲ ಬದಲಿಗೆ ತನಗೆ ಮಾತ್ರ ಸಂಪತ್ತು ಉತ್ತಮ ಎಂದು ಭಾವಿಸುತ್ತಾನೆ. ಒಬ್ಬ ವ್ಯಕ್ತಿಯು ಆರೋಗ್ಯವನ್ನು ಉತ್ತಮವೆಂದು ಪರಿಗಣಿಸಿದರೆ, ಅವನು ಶತ್ರುಗಳಿಗೂ ಉತ್ತಮ ಆರೋಗ್ಯವನ್ನು ಬಯಸುತ್ತಾನೆ ಎಂದು ಅರ್ಥವಲ್ಲ. ಶತ್ರುವಿಗೆ, ಅವನು ಬಡವನಾಗಿ ಮತ್ತು ದುರ್ಬಲನಾಗಿರಲು ಬಯಸುತ್ತಾನೆ, ಇದರಿಂದ ಅವನು ಶತ್ರುಗಳ ಮೇಲೆ ಮೇಲುಗೈ ಸಾಧಿಸಬಹುದು ಎಂದು ಯೋಚಿಸುತ್ತಾನೆ. ಹಾಗೆಯೇ, ಜನರು ಗೌರವ ಮತ್ತು ಘನತೆಯನ್ನು ಬಯಸಿದರೆ, ಅವರು ಅದನ್ನು ತನಗಾಗಿ ಬಯಸುತ್ತಾರೆಯೇ ವಿನಃ ಎಲ್ಲರಿಗೂ ಬಯಸುವುದಿಲ್ಲ. ನನಗೆ ಸಿಗುತ್ತಿರುವ ಗೌರವವನ್ನು ಇತರರು ಪಡೆಯಬೇಕೆಂದು ಎಂದು

ಎಂದಿಗೂ ಬಯಸುವುದಿಲ್ಲ. ಜಗತ್ತಿನಲ್ಲಿ ಸಾಮಾನ್ಯ ಜನರಲ್ಲಿ ಮತ್ತು ನಾಯಕರಲ್ಲಿಯೂ ಸಹ ನಾವು ಅದೇ ದೃಷ್ಟಿಕೋನಗಳನ್ನು ನೋಡುತ್ತೇವೆ. ರಾಜಕಾರಣಿಗಳು ಅಧಿಕಾರಕ್ಕೆ ಬಂದ ನಂತರ ಪರಸ್ಪರ ಹೊಡೆದಾಡಿಕೊಂಡು ದಬ್ಬಾಳಿಕೆ ನಡೆಸುತ್ತಿರುವುದು ನಮ್ಮದೇ ದೇಶಗಳಲ್ಲಿ ಕಾಣುತ್ತಿರುವುದು ಅದು ಈ ಚಿಂತನೆಯ ಫಲವೇ ಆಗಿದೆ. ಆದ್ದರಿಂದ ಶಾಂತಿಯ ಬಯಕೆ ಮಾತ್ರ ಇದ್ದರೆ, ಅದು ಪಿತೂರಿತನದ ಮೂಲವಾಗಬಹುದು ಏಕೆಂದರೆ ಅದು ಸ್ವಾರ್ಥವನ್ನು ಒಳಗೊಂಡಿರುತ್ತದೆ, ಏಕೆಂದರೆ ಶಾಂತಿಯನ್ನು ಬಯಸುವವರು ಶಾಂತಿಯನ್ನು ಬಯಸುತ್ತಾರೆ ಎಂಬ ಅರ್ಥದಲ್ಲಿ ಅವರು ಮತ್ತು ಅವರ ಪ್ರೀತಿಪಾತ್ರರು ಅಥವಾ ಅವರ ಸಮೂದಾಯದ ಜನರಿಗೆ ಮಾತ್ರ ಶಾಂತಿಯನ್ನು ಹೊಂದಿರುತ್ತಾರೆ. ಇಲ್ಲದಿದ್ದರೆ, ಇತರರಿಗೆ ಮತ್ತು ಶತ್ರುಗಳಿಗೆ ಅವರ ಶಾಂತಿಯನ್ನು ಹಾಳುಮಾಡಲು ಅವರು ಬಯಸುತ್ತಾರೆ. ಆದುದರಿಂದ ತನಗಾಗಿ ಒಂದು ಗುಣಮಟ್ಟ ಮತ್ತು ಇತರರಿಗಾಗಿ ಬೇರೆ ಮಟ್ಟ ಎಂಬ ತತ್ವವನ್ನು ಅನ್ವಯಿಸಿದರೆ, ಜಗತ್ತಿನಲ್ಲಿ ಯಾವುದೇ ಶಾಂತಿ ಸ್ಥಾಪನೆಯಾದಾಗ ಅದು ಕೆಲವೇ ಜನರಿಗೆ ಮಾತ್ರ ಸೀಮಿತವಾಗಿರುತ್ತದೆ, ಇಡೀ ಪ್ರಪಂಚದ ಶಾಂತಿಯಲ್ಲ. ಮತ್ತು ಇಡೀ ಪ್ರಪಂಚದಲ್ಲಿ ಶಾಂತಿ ಇಲ್ಲದಿದ್ದರೆ, ಇಡೀ ಜಗತ್ತಿನಲ್ಲಿ ಶಾಂತಿ ಇಲ್ಲದಿರುವುದನ್ನು ನಿಜವಾದ ಶಾಂತಿ ಎಂದು ಕರೆಯಲಾಗುವುದಿಲ್ಲ. ವೈಯಕ್ತಿಕ, ಕುಟುಂಬ, ಜನಾಂಗೀಯ, ರಾಷ್ಟ್ರೀಯ ಮತ್ತು ದೇಶದ ಆದ್ಯತೆಗಳ ಮೇಲೆ ಕೇಂದ್ರ ಅಕ್ಷವನ್ನು ಸಾಧಿಸಲು ಅದನ್ನು ಸ್ಥಾಪಿಸಲು ಪ್ರಯತ್ನಿಸಿದರೆ ಮಾತ್ರ ನಿಜವಾದ ಶಾಂತಿ ಇರುತ್ತದೆ. ಮತ್ತು ಒಬ್ಬ ವ್ಯಕ್ತಿಯು ನನಗೆ ಶಾಂತಿಯನ್ನು ಬಯಸದೆ ನನ್ನ ಮನೆ ಮತ್ತು ದೇಶವಾದ ಇಡೀ ಜಗತ್ತಿಗೆ ಶಾಂತಿಯನ್ನು ಬಯಸುವ ಉನ್ನತ ಅಸ್ತಿತ್ವವು (ಸರ್ವಶಕ್ತನಾದ ಅಲ್ಲಾಹನು) ನನ್ನ ಮೇಲಿದೆ ಅದು ನನಗೆ ಮಾತ್ರ ಶಾಂತಿಯನ್ನು ಬಯಸುವುದಿಲ್ಲ ಬದಲಿಗೆ ಇಡೀ ಪ್ರಪಂಚಕ್ಕಾಗಿ ಶಾಂತಿಯನ್ನು ಬಯಸುತ್ತದೆ ಎಂದು ಅರ್ಥಮಾಡಿಕೊಂಡಾಗ ಮಾತ್ರ ಇದು ಸಂಭವಿಸುತ್ತದೆ. ಆದ್ದರಿಂದ, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಶಾಂತಿ ಬೋಧನೆಯ ಕೇಂದ್ರ ಅಂಶವೆಂದರೆ ಉನ್ನತ ಜೀವಿಯು ನನ್ನನ್ನು ನೋಡುತ್ತಿದೆ ಎಂಬ ಅರಿವಾಗಿದೆ. ಇದಕ್ಕಾಗಿ ನಾನು ನನ್ನ ಮಾತು ಮತ್ತು ಕಾರ್ಯಗಳನ್ನು ಒಂದುಗೂಡಿಸಬೇಕು. ಈ ತತ್ವವನ್ನು ಯಾವಾಗಲೂ ಅನುಸರಿಸಲು, ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಹೇಳಿದ ಸುವರ್ಣ ತತ್ವವನ್ನು 'ನೀವು ನಿಮಗಾಗಿ ಇಷ್ಟಪಡುವದನ್ನು ಇತರರಿಗೂ ಸಹ ಅದನ್ನೆ ಇಷ್ಟಪಪಡಬೇಕು' ಎಂಬುದನ್ನು ಮುಂದೆ ಇಡಬೇಕು.

ಆದ್ದರಿಂದ, ಈ ತತ್ವವನ್ನು ಮುಂದಿಟ್ಟುಕೊಂಡು, ನಾನು ನನಗೆ ಅಥವಾ ನನ್ನ ರಾಷ್ಟ್ರಕ್ಕೆ ಅಥವಾ ನನ್ನ ದೇಶಕ್ಕೆ ಮಾತ್ರ ಶಾಂತಿಯನ್ನು ಬಯಸಿದರೆ, ಈ ಸಂದರ್ಭದಲ್ಲಿ ನಾನು ಸರ್ವಶಕ್ತನಾದ ಅಲ್ಲಾಹನ ಸಹಾಯ ಮತ್ತು ಅಲ್ಲಾಹನ ಸಂತೃಪ್ತಿ ಎಂದಿಗೂ ಪಡೆಯುವುದಿಲ್ಲ ಎಂದು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಎಲ್ಲವನ್ನೂ ಅಲ್ಲಾಹನಿಗಾಗಿ ಮಾಡಬೇಕು ಎಂಬ ನಂಬಿಕೆಯ ಮೇಲೆ ವ್ಯಕ್ತಿಯನ್ನು ಸ್ಥಾಪಿಸಿದಾಗ, ನಿಜವಾದ ಶಾಂತಿಯನ್ನು ಸ್ಥಾಪಿಸಬಹುದು, ಇಲ್ಲದಿದ್ದರೆ ಅದು ಸಾಧ್ಯವಿಲ್ಲ.

ಆದುದರಿಂದ ಮಹೋನ್ನತನಾದ ಅಲ್ಲಾಹನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮೂಲಕ ನಮಗೆ ತಿಳಿಸಿದನು, **ಅಲ್‌ಮಲಿಕುಲ್ ಖುದ್ದೂಸುಸ್ಸಲಾಮುಲ್ ಮುಮಿನು** (ಅಲ್‌ಹಶರ್:24) ಅವನು ರಾಜನಾಗಿದ್ದಾನೆ. ಪರಿಶುದ್ಧನಾಗಿದ್ದಾನೆ, ಅವನು ಇತರರನ್ನು ಶುದ್ಧೀಕರಿಸುತ್ತಾನೆ. ಅವನೇ ಪ್ರತಿ ದೋಷದಿಂದ ಸುರಕ್ಷಿತವಾಗಿರುತ್ತಾನೆ, ಇತರರನ್ನು ಸುರಕ್ಷಿತವಾಗಿರಿಸುತ್ತಾನೆ. ಅವನು ಎಲ್ಲರಿಗೂ ಶಾಂತಿಯನ್ನು ನಿಡುವವನು. **ಅಲ್‌ಮಲಿಕುಲ್ ಖುದ್ದೂಸುಸ್ಸಲಾಮುಲ್ ಮುಮಿನು** ಮಾನವ ಉದ್ದೇಶಗಳನ್ನು ಶುದ್ಧೀಕರಿಸಿದ್ದಾರೆ ಎಂದು ಹೇಳುವ ಮೂಲಕ ಮತ್ತು ಉದ್ದೇಶಗಳು ಸರಿಯಾಗಿರದಿದ್ದರೆ, ಕೆಲಸವು ಸರಿಯಾಗಿರುವುದಿಲ್ಲ ಎಂಬುದು ಖಚಿತವಾಗಿದೆ. (ನಿಯ್ಯತ್) ಉದ್ದೇಶ ಸ್ಪಷ್ಟವಾಗಿಲ್ಲದಿದ್ದರೆ, ಕೆಲಸದಲ್ಲಿ ಅನುಗ್ರಹವು ಹೇಗೆ ಲಭಿಸುತ್ತದೆ? ಉದ್ದೇಶಗಳು ಸರಿಯಾಗಿರದಿದ್ದರೆ, ಕೆಲಸ ಎಂದಿಗೂ ಸರಿಯಾಗುವುದಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು.

ಪ್ರಸ್ತುತ ಕಾಲದಲ್ಲಿ ಜಗತ್ತಿನಲ್ಲಿ ನಡೆಯುತ್ತಿರುವ ಎಲ್ಲಾ ಯುದ್ಧಗಳು ಮತ್ತು ಗಲಭೆಗಳು ಮನುಷ್ಯನ ಉದ್ದೇಶಗಳು ಸ್ಪಷ್ಟವಾಗಿಲ್ಲದ ಕಾರಣದಿಂದಾಗಿದೆ.

ಜನರ ಆಶಯಗಳು ಅವರು ಬಾಯಿಯಿಂದ ಹೇಳುವ ಪ್ರಕಾರವಲ್ಲ ಮತ್ತು ಅವರ ಮಾತುಗಳು ಮತ್ತು ಕಾರ್ಯಗಳು ಅವರ ಇಚ್ಛೆಗೆ ಅನುಗುಣವಾಗಿಲ್ಲ. ಮತ್ತು ಪ್ರಪಂಚದ ಈ ಗಲಭೆಯಲ್ಲಿ ದೊಡ್ಡ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟಗಳೆಂದು ಕರೆಯಲ್ಪಡುವ ಹೆಚ್ಚಿನ ಪಾತ್ರವಿದೆ. ನಿಸ್ಸಂದೇಹವಾಗಿ ಇಂದು ಜಗತ್ತು ಯುದ್ಧವನ್ನು ಕೆಟ್ಟದ್ದು ಎಂದು ಹೇಳುತ್ತಾರೆ. ಯುದ್ಧ ಮಾಡುವುದು ಕೆಟ್ಟದ್ದು ಎಂಬ ಒಂದೇ ಹೇಳಿಕೆ ಪ್ರತಿಯೊಬ್ಬ ನಾಯಕರಿಗೂ ಇದೆ, ಆದರೆ ಇದರ ಅರ್ಥವೇನೆಂದರೆ ಯಾರಾದರೂ ನಮ್ಮ ವಿರುದ್ಧ ಹೋರಾಡಿದರೆ ಅದು ಕೆಟ್ಟದು, ಆದರೆ ಯುದ್ಧದ ಪ್ರಾರಂಭ ನಮ್ಮಿಂದ ಆದರೆ ಆಗ ಅದು ಕೆಟ್ಟದ್ದಲ್ಲ ಮತ್ತು ಈ ದೋಷಕ್ಕೆ ಕಾರಣವೇನೆಂದರೆ ಈ ಜನರು 'ಸಲಾಮ್' (ಶಾಂತಿ) ಆಗಿರುವಂತಹ ಮತ್ತು ಶಾಂತಿ ನೀಡುವ ಅಸ್ತಿತ್ವವದ ಕಡೆ ಗಮನಹರಿಸುವುದಿಲ್ಲ. ನಮ್ಮ ಹಿತಾಸಕ್ತಿ ಇರುವವರೆಗೆ ನಾವು ಶಾಂತಿಯ ಘೋಷಣೆಯನ್ನು ಕೂಗುತ್ತೇವೆ, ಆದರೆ ಅದು ನಮ್ಮ ಹಿತಾಸಕ್ತಿಗೆ ವಿರುದ್ಧವಾದಾಗ ನಾವು ಅದನ್ನು ತಿರಸ್ಕರಿಸುತ್ತೇವೆ ಎಂದು ಅವರು ಅರ್ಥಮಾಡಿಕೊಂಡಿದ್ದಾರೆ. ಯಾರಾದರೂ ನಮ್ಮ ಶತ್ರುಗಳಿಗೆ ಸಹಾಯ ಮಾಡಿ ಶಸ್ತ್ರಾಸ್ತ್ರಗಳನ್ನು ನೀಡಿದರೆ, ಅದು ಯಾವುದೇ ಸಂದರ್ಭದಲ್ಲಿ ಸ್ವೀಕಾರಾರ್ಹವಲ್ಲ, ಆದರೆ ನಾವು ಯಾರಿಗಾದರೂ ಶಸ್ತ್ರಾಸ್ತ್ರಗಳನ್ನು ನೀಡಿದರೆ, ಅವರು ಹಿಂಸಾಚಾರಕ್ಕೆ ಬಳಸುತ್ತಿದ್ದರೂ ಸಹ, ಅದು ಅನುಮತಿಯಾಗಿದೆ. ಇದೇ ಚಿಂತನೆಯಾದರೆ ನಿಜವಾದ ಶಾಂತಿ ನೆಲೆಸುವುದು ಹೇಗೆ?

ಆದ್ದರಿಂದ ಜಗತ್ತಿನಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸಲು ಇಡೀ ಜಗತ್ತಿಲ್ಲಿ ದೇವನೊಬ್ಬನಿದ್ದಾನೆ ಆತನು ಇಡೀ ಜಗತ್ತಿನ ಎಲ್ಲಾ ಜನರು ಶಾಂತಿಯಿಂದ ಬದುಕಲು ಬಯಸುತ್ತಾನೆ ಎಂಬ ಈ ನಂಬಿಕೆ ಮತ್ತು ಅದನ್ನು ಅನುಸರಿಸುವುದು ಪರಿಣಾಮಕಾರಿಯಾಗಿರುತ್ತದೆ.

ಮತ್ತು ಈ ನಂಬಿಕೆಯನ್ನು ಅನುಸರಿಸಿದಾಗ, ಮನುಷ್ಯನ ಆಸೆಗಳು ಸ್ವಾರ್ಥಕ್ಕಿಂತ ಹೆಚ್ಚಾಗಿರುತ್ತದೆ, ಆದರೆ ಪ್ರಪಂಚದ ಸಾಮಾನ್ಯ ಪ್ರಯೋಜನಕ್ಕಾಗಿ ಇರುತ್ತದೆ ಮತ್ತು ಇದು ಸಂಭವಿಸಿದಾಗ ನಮ್ಮ ಆಲೋಚನೆಗಳು ಮತ್ತು ಶಾಂತಿ ಮತ್ತು ಭದ್ರತೆಯನ್ನು ಸ್ಥಾಪಿಸುವ ಮಾನದಂಡಗಳು ಬೇರೆಯೇ ಆಗಿರುತ್ತವೆ. ಈ ವಿಷಯವು ನಮಗೆ ಪ್ರಯೋಜನವನ್ನು ನೀಡುತ್ತದೆಯೇ ಅಥವಾ ಇಲ್ಲವೇ ಎಂದು ನಾವು ನೋಡುವುದಿಲ್ಲ, ಆದರೆ ಇಡೀ ಪ್ರಪಂಚದ ಮೇಲೆ ಅದು ಯಾವ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ನಾವು ನೋಡುತ್ತೇವೆ. ಪ್ರಪಂಚದ ಜನರು ಯಾವಾಗಲೂ ತಮ್ಮ ಲಾಭಕ್ಕಾಗಿ ಇತರರ ಶಾಂತಿಯನ್ನು ಹಾಳುಮಾಡುತ್ತಾರೆ, ಆದರೆ ಪರಮಾತ್ಮನಿದ್ದಾನೆ ಎಂದು ನಂಬುವವರು ಎಂದಿಗೂ ಧೈರ್ಯ ಮಾಡುವುದಿಲ್ಲ ಏಕೆಂದರೆ ನಾವು ಹಾಗೆ ಮಾಡಿದರೆ, ಪರಮಾತ್ಮನು ನಮ್ಮನ್ನು ಪುಡಿಮಾಡುತ್ತಾನೆ ಎಂದು ಅವರಿಗೆ ತಿಳಿದಿರುತ್ತದೆ. ಏಕೆಂದರೆ ಒಬ್ಬ ಪರಮಾತ್ಮನನ್ನು ಗುರುತಿಸುವವರೆಗೆ, ಅವನ ಪ್ರೀತಿ ಹೃದಯದಲ್ಲಿ ಹುಟ್ಟುವವರೆಗೆ ನಿಜವಾದ ಶಾಂತಿಯನ್ನು ಸ್ಥಾಪಿಸಲಾಗುವುದಿಲ್ಲ. ಮತ್ತು ಸರ್ವಶಕ್ತನಾದ ಅಲ್ಲಾಹನು ಶಾಂತಿಯನ್ನು ನೀಡುವವನು ಎಂಬ ಈ ನಂಬಿಕೆಯು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮೂಲಕ ಇಸ್ಲಾಂನಿಂದ ಮಾತ್ರ ಪ್ರಸ್ತುತಪಡಿಸಲ್ಪಟ್ಟಿದೆ.

ಅಲ್ಲಾಹನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ಬಹಿರಂಗಪಡಿಸಿದ ಬೋಧನೆಯಲ್ಲಿ ಅಲ್ಲಾಹನು ಹೇಳಿದನು: **ಖದ್ ಜಾಅಕುಮ್ ಮಿನಲ್ಲಾಹಿ ನೂರುವ್ವ ಕಿತಾಬುಮ್ಮುಬೀನ್– ಯಹ್‌ದೀ ಬಿಹಿಲ್ಲಾಹು ಮನಿತ್ತಬಅ ರಿಝ್ವಾನಹೂ ಸುಬುಲಸ್ಸಲಾಮಿ** (ಅಲ್‌ಮಾಇದಃ: 16–17) "ನಿಶ್ಚಯವಾಗಿಯೂ ಅಲ್ಲಾಹನಿಂದ ಒಂದು ಪ್ರಕಾಶ ಮತ್ತು ಸ್ಪಷ್ಟವಾದೊಂದು ಗ್ರಂಥ ನಿಮಗೆ ಬಂದಿರುತ್ತದೆ. ಅದರ ಮೂಲಕ ಅಲ್ಲಾಹನು ತನ್ನ ಸಂತೃಪ್ತಿಯನ್ನು ಬಯುಸುವವರಿಗೆ ರಕ್ಷಾ ಮಾರ್ಗದೆಡೆಗೆ ದಾರಿ ತೋರಿಸುತ್ತಾನೆ. ಆದ್ದರಿಂದ ಅಲ್ಲಾಹನು ಮಾರ್ಗದರ್ಶನದ ಪ್ರಕಾಶವನ್ನು ಕಳುಹಿಸಿದನು, ಎಲ್ಲಾ ಆಜ್ಞೆಗಳೊಂದಿಗೆ ಪುಸ್ತಕವನ್ನು ಕಳುಹಿಸಿದನು ಮತ್ತು ಅದರಲ್ಲಿ ಸುರಕ್ಷತೆಯ ಮಾರ್ಗಗಳ ಕಡೆಗೆ ಸ್ಪಷ್ಟವಾದ ಸೂಚನೆಗಳನ್ನು ವಿವರಿಸಿದನು. ಈಗ ಅದನ್ನು ಪರಿಪೂರ್ಣವಾಗಿ ಅನುಸರಿಸುವವರು ಸುರಕ್ಷತೆಯ ಮಾರ್ಗಗಳನ್ನು ಕಂಡುಕೊಳ್ಳುವರು. ಇಂದು ಮುಸ್ಲಿಮರಲ್ಲಿ ಪಿತೂರಿತನ, ಗಲಭೆಯ ಸ್ಥಿತಿ ಇದ್ದರೆ, ಪರಸ್ಪರ ಯುದ್ಧಗಳ ಪರಿಸ್ಥಿತಿ ಇದ್ದಲ್ಲಿ ಅವರು ನಿಜವಾಗಿಯೂ ಸರ್ವಶಕ್ತನಾದ ಅಲ್ಲಾಹನು ನೀಡಿದ ಮತ್ತು ಕಳುಹಿಸಿದ ಗ್ರಂಥ ಮತ್ತು ಪ್ರಕಾಶವನ್ನು ಅನುಸರಿಸುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ವಾಸ್ತವವಾಗಿ, ನಾವು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರನ್ನು ಪ್ರೀತಿಸುತ್ತೇವೆ ಎಂಬ ವಾದಗಳಾಗಿವೆ, ಆದರೆ ಅನುಸರಣೆಯು ಅದರ ವಿರುದ್ಧವಾಗಿದೆ. ಅಲ್ಲಾಹನ ಮಾತುಗಳು ಎಂದಿಗೂ ತಪ್ಪಾಗಲಾರದು. ಅಲ್ಲಾಹನ ಮಾತು ಎಂದಿಗೂ ತಪ್ಪಾಗಲಾರದು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮಾತುಗಳು ಎಂದಿಗೂ ತಪ್ಪಾಗಲಾರದು.

ಮುಸ್ಲಿಮರಲ್ಲಿ ಗಲಭೆಗಳು ಮತ್ತು ಕಿಡಿಗೇಡಿತನ ಇದ್ದಲ್ಲಿ ಅವರು ಈ ಸ್ಪಷ್ಟವಾದ ಪುಸ್ತಕವನ್ನು ನಂಬುವುದಾಗಿ ವಾದ ಮಾಡುತ್ತಾರೆ ಆದರೆ ಸರ್ವಶಕ್ತನಾದ ಅಲ್ಲಾಹನು ಅದರಲ್ಲಿ ನೀಡಿರುವಂತಹ ಬೋಧನೆಗಳನ್ನು ಅನುಸರಿಸುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರೊಂದಿಗೆ ಪ್ರೀತಿಯ ದಾವೆ ಇದೆ ಆದರೆ ಅವರ ಬೋಧನೆಯ ಅನುಸರಣೆ ಇಲ್ಲ.

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 06 April 2023, Issue No. 14

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಆದ್ದರಿಂದ ಇಂದು ಈ ಬೋಧನೆಯನ್ನು ತಮ್ಮ ಜೀವನದ ಒಂದು ಭಾಗವಾಗಿಸುವುದು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ನಿಜವಾದ ಗುಲಾಮರ ಅನುಯಾಯಿಗಳ ಕಾರ್ಯವಾಗಿದೆ. ನೀವು ಪವಿತ್ರ ಖುರ್‌ಆನ್‌ನ ಆದೇಶಗಳನ್ನು ಅನುಸರಿಸಿದರೆ, ನಿಮ್ಮ ಪರಿಸರದಲ್ಲಿ ನೀವು ಭದ್ರತೆಯನ್ನು ರಚಿಸಬಹುದು ಮತ್ತು ಜಗತ್ತಿಗೆ ಭದ್ರತೆಯ ಸಂದೇಶವನ್ನು ರವಾನಿಸಬಹುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈಗ ಆಕಾಶದ ಕೆಳಗೆ ಒಬ್ಬನೇ ಒಬ್ಬ ಪ್ರವಾದಿ ಮತ್ತು ಒಂದೇ ಒಂದು ಗ್ರಂಥವಿದೆ ಅಂದರೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಅತ್ಯುನ್ನತ ಮತ್ತು ಉತ್ತಮರಾಗಿದ್ದಾರೆ. ಎಲ್ಲಾ ಪ್ರವಾದಿಗಳು ಮತ್ತು ಎಲ್ಲಾ ಸಂದೇಶವಾಹಕರಲ್ಲಿ ಅತ್ಯಂತ ಪರಿಪೂರ್ಣರು ಮತ್ತು ಪ್ರವಾದಿಗಳ ಮುದ್ರೆ (ಖಾತಮಲ್ ಅಂಬಿಯಾ) ಮತ್ತು ಖೈರುನ್ನಾಸ್ ಜನರಲ್ಲಿ ಅತ್ಯುತ್ತಮರಾಗಿದ್ದಾರೆ. ಅವರನ್ನು ಅನುಸರಿಸಿದರೆ ಸರ್ವಶಕ್ತನಾದ ಅಲ್ಲಾಹನು ಭೇಟಿಯಾಗುತ್ತಾನೆ ಮತ್ತು ಅಂಧಕಾರದ ಮುಸುಕುಗಳನ್ನು ತೆಗೆದುಹಾಕಲಾಗುತ್ತದೆ ಮತ್ತು ಈ ಜಗತ್ತಿನಲ್ಲಿಯೇ ನಿಜವಾದ ಮೋಕ್ಷದ ಕುರುಹುಗಳು ಕಾಣಿಸಿಕೊಳ್ಳುತ್ತವೆ ಮತ್ತು ಪವಿತ್ರ ಖುರ್‌ಆನ್‌ನ ನಿಜವಾದ ಮತ್ತು ಪರಿಪೂರ್ಣ ಮಾರ್ಗದರ್ಶನ ಮತ್ತು ಪರಿಣಾಮಗಳನ್ನು ಒಳಗೊಂಡಿರುವ ನಿಜವಾದ ಜ್ಞಾನಗಳು ಮತ್ತು ದೈವಜ್ಞಾನವನ್ನು ಪಡೆಯಲಾಗುತ್ತದೆ ಮತ್ತು ಹೃದಯವು ಮಾನವ ಮಾಲಿನ್ಯದಿಂದ ಶುದ್ಧವಾಗುತ್ತದೆ ಮತ್ತು ಒಬ್ಬ ವ್ಯಕ್ತಿಯು ಅಜ್ಞಾನ ಮತ್ತು ನಿರ್ಲಕ್ಷ್ಯ ಮತ್ತು ಅನುಮಾನಗಳ ಪರದೆಗಳಿಂದ ಮುಕ್ತನಾಗಿ ಹಖ್ಖುಲ್ ಯಖೀನ್‌ಗೆ (ಸತ್ಯದ ಸ್ಥಾನವನ್ನು) ತಲುಪುತ್ತಾನೆ." (ಬರಾಹೀನೆ ಅಹ್ಮದೀಯ, ರೂಹಾನಿ ಖಝಾಈನ್, ಸಂಪುಟ-1, ಪುಟ-557-558 ಅಡಿಟಿಪ್ಪಣಿಯ ಅಡಿಟಿಪ್ಪಣಿ)

ಹೀಗೆ ಸರ್ವಶಕ್ತನಾದ ಅಲ್ಲಾಹನು ತನ್ನ ಪ್ರಕಾಶವನ್ನು, ಅದು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಆಗಿದ್ದಾರೆ ಮತ್ತು ಪ್ರಕಾಶಮಾನವಾದ ಗ್ರಂಥವಾದ ಪವಿತ್ರ ಖುರ್‌ಆನ್ ಅದು ಸರ್ವಜ್ಞಾನಗಳ ಚಿಲುಮೆಯಾಗಿದೆ ಮತ್ತು ಮಾರ್ಗದರ್ಶನದ ಪ್ರಕಾಶವಾಗಿದೆ ಮತ್ತು ಶಾಂತಿಯ ಸಂದೇಶ ಅದರಲ್ಲಿದೆ ಅದನ್ನು ಕಳುಹಿಸುವ ಮೂಲಕ ಮಾನವೀಯತೆಗೆ ದೊಡ್ಡ ಉಪಕಾರವನ್ನು ಮಾಡಿದ್ದಾನೆ. ಮನುಷ್ಯನು ಅದರ ಲಾಭವನ್ನು ಪಡೆಯದೆ ತನ್ನ ವಿನಾಶಕಾರಿ ಸ್ವಾರ್ಥಿ ಹಿತಾಸಕ್ತಿಗಳಿಗೆ ಬಂಧಿಯಾಗಿ ಉಳಿದಿದ್ದರೆ, ಇದಕ್ಕಿಂತ ಹೆಚ್ಚು ದುರದೃಷ್ಟಕರ ವಿಷಯ ಏನಿದೆ?

ಆದ್ದರಿಂದ ನಾವು ನಮ್ಮ ಇಹಲೋಕ ಹಾಗೂ ಪರಲೋಕವನ್ನು ಸುಂದರಗೊಳಿಸಲು ಬಯಸಿದ್ದಲ್ಲಿ, ಶಾಂತಿ ಮತ್ತು ಭದ್ರತೆಯಿಂದ ಬದುಕಲು ಬಯಸಿದ್ದಲ್ಲಿ ಸರ್ವಶಕ್ತನಾದ ಅಲ್ಲಾಹನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮೇಲೆ ಅವತರಿಸಿರುವಂತಹ ಈ ದೈವವಾಣಿ (ಕಲಾಮ್) ಯನ್ನು ನಾವು ಯಾವಾಗಲೂ ನಮ್ಮ ಮುಂದೆ ಇಟ್ಟುಕೊಳ್ಳಬೇಕು, **ಯಹ್‌ದಿ ಬಿಹಿಲ್ಲಾಹು ಮನಿತ್ತಬ ರಿಝ್ವಾನಹೂ ಸುಬುಲಸ್ಸಲಾಮಿ,** ಈ ಪ್ರಕಾಶಮಾನವಾದ ಪುಸ್ತಕದ ಮಾರ್ಗದರ್ಶನಗಳನ್ನು ಓದಬೇಕು ಮತ್ತು ಮುಂದೆ ಇಡಬೇಕು, ಆಗ ಶಾಂತಿಯ ಮಾರ್ಗವನ್ನು ಅನುಸರಿಸುವವರಾಗುತ್ತಾರೆ. ಭದ್ರತೆಯ ಮಾರ್ಗದಲ್ಲಿ ನಡೆಯುವವರಾಗುತ್ತಾರೆ. ಈ ಪುಸ್ತಕದಲ್ಲಿ ಮಾನವ ಶಾಂತಿಯನ್ನು ಹಾಳು ಮಾಡುವ ಯಾವುದೇ ಕ್ರಮವಿಲ್ಲ. ಹಾಗಾಗಿ ಇದು ಇಂದು ನಮಗೆ ಮತ್ತು ಇತರರಿಗೆ ನೀಡಬೇಕಾದ ಸಂದೇಶವಾಗಿದೆ ಮತ್ತು ಇದು ಜಗತ್ತಿನಲ್ಲಿ ಶಾಂತಿಯ ಭರವಸೆಯಾಗಿದೆ.

ಮತ್ತು ಇದು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ತಮ್ಮ ಸಹಚರರ ನಡುವೆ ಸೃಷ್ಟಿಸಿದ ಕ್ರಾಂತಿಯಾಗಿದೆ ಮತ್ತು ಪ್ರಾಯೋಗಿಕವಾಗಿ ಅಂತಹ ಜಮಾಅತ್ ಅನ್ನು ಸಿದ್ಧಪಡಿಸಿದರು, **ಇಝಾ ಖಾತಬಹುಮುಲ್ ಜಾಹಿಲೂನ ಖಾಲೂ ಸಲಾಮ** (ಅಲ್-ಫುರ್ಕಾನ್: 64), ಮತ್ತು ಅಜ್ಞಾನಿಗಳು ಅವರನ್ನು ಉದ್ದೇಶಿಸಿದರೆ ಅವರು ಸಲಾಮ್ ಎಂದು ಹೇಳುತ್ತಾರೆ, ಒಂದು ಉದಾಹರಣೆ ಮಾಡಿ ಈ ಸ್ಥಿತಿ ನಮ್ಮಲ್ಲಿ ಹುಟ್ಟಿದರೆ ಮತ್ತು ನಾವು ಇಂತಹ ಸ್ಥಿತಿಯನ್ನು ಪ್ರಪಂಚದಲ್ಲಿ ಸೃಷ್ಟಿಸಿದರೆ ನಮ್ಮ ವರ್ತಮಾನವು ಶಾಂತಿಯಿಂದ ಇರುತ್ತದೆ ಮತ್ತು ನಮ್ಮ ಭವಿಷ್ಯವು ಶಾಂತಿಯಿಂದ ಇರುತ್ತದೆ.

ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವಿಶ್ವಾಸಿಗಳಿಗೆ ಇದು ಮಹತ್ತರವಾದ ಕಾರ್ಯವಾಗಿದೆ. ಅವರು ತಮ್ಮ ಮನೆಗಳಲ್ಲಿ ಮತ್ತು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶಾಂತಿ ಮತ್ತು ಭದ್ರತೆಯನ್ನು ಸೃಷ್ಟಿಸಬೇಕು ಮತ್ತು ಜಗತ್ತಿನಲ್ಲಿ ಶಾಂತಿ ಮತ್ತು ಭದ್ರತೆಯನ್ನು ಸೃಷ್ಟಿಸಬೇಕು.

ಮತ್ತು ನಮ್ಮ ಹೃದಯಗಳು ಶುದ್ಧ ಏಕದೇವೋಪಾಸನೆಯಿಂದ ತುಂಬಿದಾಗ ಮತ್ತು ಜಗತ್ತನ್ನು ನಿಜವಾದ ಏಕದೇವೋಪಾಸನೆಗೆ ತಂದಾಗ ಮಾತ್ರ ಈ ಕೆಲಸ ಮಾಡಲಾಗುತ್ತದೆ.

ಪರಿಪೂರ್ಣ ಏಕದೇವೋಪಾಸನೆ ಸ್ಥಾಪನೆಯಾಗದೆ ಶಾಂತಿ ನೆಲೆಸಲು ಸಾಧ್ಯವಿಲ್ಲ ಎಂಬುದು ಖಚಿತವಾಗಿದೆ.

ಪರಮಾತ್ಮನನ್ನು ಏನೇ ಇರಲಿ ಒಪ್ಪಿಕೊಳ್ಳಬೇಕು ಮತ್ತು ಆ ಪರಮಾತ್ಮನು ಸರ್ವಶಕ್ತನಾದ ಅಲ್ಲಾಹನ ಅಸ್ತಿತ್ವವಾಗಿದೆ ಮತ್ತು ಅದರ ಕಲ್ಪನೆಯು ಹೃದಯದಲ್ಲಿ ಏಕದೇವೋಪಾಸನೆ (ತೌಹೀದ್) ಯನ್ನು ಸ್ಥಾಪಿಸದೆ ಬರುವುದಿಲ್ಲ ಮತ್ತು ಏಕದೇವೋಪಾಸನೆ (ತೌಹೀದ್) ಯನ್ನು ಸ್ಥಾಪಿಸದಿದ್ದರೆ ಯುದ್ಧಗಳು ಸಹ ಮುಕ್ತಾಯವಾಗುವುದಿಲ್ಲ ಅದು ಮುಂದುವರಿಯುತ್ತದೆ ಎಂದು ಮೊದಲೇ ಹೇಳಲಾಗಿದೆ. ನಿಜವಾದ ಶಾಂತಿ, ಪರಸ್ಪರ ಪ್ರೀತಿ ಮತ್ತು ವಾತ್ಸಲ್ಯ, ಸಹೋದರತ್ವ ಇದ್ದಾಗ ಮಾತ್ರ ಯುದ್ಧಗಳನ್ನು ತಡೆಯಬಹುದು.

ಜನರ ನಡುವೆ ನಿಜವಾದ ಸಹೋದರತ್ವ ಸ್ಥಾಪಿತವಾಗದವರೆಗೆ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ ಮತ್ತು ಒಬ್ಬ ದೇವರನ್ನು ನಂಬದೆ ನಿಜವಾದ ಏಕತೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ. ನಿಜವಾದ ಸಹೋದರತ್ವವು ಏಕದೇವನನ್ನು ನಂಬುವ ತನಕ ಸ್ಥಾಪಿಸಲು ಸಾಧ್ಯವಿಲ್ಲ, ಏಕದೇವನೊಂದಿಗೆ ಸಂಬಂಧವಿಲ್ಲದೆ ಸ್ಥಾಪಿಸಲು ಸಾಧ್ಯವಿಲ್ಲ. ಕೇವಲ ನಂಬುವುದು ಸಾಲದ ಬದಲಿಗೆ ಒಂದು ನಿಕಟವಾದ ಸಂಬಂಧವನ್ನು ಸ್ಥಾಪಿಸಬೇಕಾಗುತ್ತದೆ ಮತ್ತು ನಾವು ರಸೂಲುಲ್ಲಾಹ್(ಸ) ಅವರಿಂದ ಈ ಬೋಧನೆಯನ್ನು ಸಹ ಪಡೆದಿದ್ದೇವೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ನಮಗೆ ಪವಿತ್ರ ಖುರ್‌ಆನ್‌ನಲ್ಲಿ **ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್** (ಅಲ್-ಫಾತಿಹಾ:2) ರ ಬೋಧನೆಯನ್ನು ನೀಡಿದಾಗ, ಅವರು ಅದನ್ನು ಪ್ರತಿ ನಮಾಝಿನಲ್ಲಿ ಪಠಿಸುವಂತೆ ಆದೇಶಿಸಿದರು. ಅದರ ಮೂಲ ಉದ್ದೇಶ ಮುಸ್ಲಿಮರಲ್ಲಿ ಸಹೋದರತೆಯ ಪರಿಕಲ್ಪನೆಯನ್ನು ಸ್ಥಾಪಿತವಾಗಲಿ ಎಂದಾಗಿದೆ. **ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್** ಅನ್ನು ಪಠಿಸುವ ಮೂಲಕ, ಸರ್ವಶಕ್ತನಾದ ಅಲ್ಲಾಹನ ಪ್ರಭುತ್ವವು ಇಡೀ ಬ್ರಹ್ಮಾಂಡದ ಮೇಲೆ ಹರಡಿಕೊಂಡಿದೆ ಎಂಬ ಅರಿವು ಉಂಟಾಗುತ್ತದೆ. ಈ ಪದಗಳನ್ನು ಪಠಿಸುವುದರಿಂದ, ಒಬ್ಬ ವ್ಯಕ್ತಿಯ ಆಲೋಚನೆಯು ವಿಸ್ತಾರಗೊಳ್ಳುತ್ತದೆ ಮತ್ತು ಅವನು ಸಕಲ ಲೋಕಗಳ ಪ್ರಭುವಾದ ಅಲ್ಲಾಹನನ್ನು ಸ್ತುತಿಸುತ್ತಾನೆ. ಅವನು ಕ್ರಿಶ್ಚಿಯನ್ನರ ಪ್ರಭುವಾಗಿದ್ದಾನೆ, ಹಿಂದೂಗಳ ಪ್ರಭುವಾಗಿದ್ದಾನೆ, ಯಹೂದಿಗಳ ಪ್ರಭುವೂ ಆಗಿದ್ದಾನೆ ಮತ್ತು ಪ್ರತಿಯೊಬ್ಬರ ಪ್ರಭುವಾಗಿದ್ದಾನೆ. ಓರ್ವ ವ್ಯಕ್ತಿಯು ಈ ಪದಗಳನ್ನು ಓದಿದಾಗ, ಯಾರನ್ನಾದರೂ ಹೇಗೆ ದ್ವೇಷಿಸಲು ಸಾಧ್ಯ? ಇದನ್ನೇ ನಾನು ಒಮ್ಮೆ ಅಮೆರಿಕದಲ್ಲಿ ವಿದೇಶಿಗರ ಕೂಟದಲ್ಲಿ ವಿವರಿಸಿದ್ದೇನೆ, ಆಗ ಅವರು ಹೇಳುತ್ತಾರೆ, ಇದು ಯಾವ ರೀತಿಯ ಶಿಕ್ಷಣವಾಗಿದೆ! ಮತ್ತು ವಾಸ್ತವವಾಗಿ, ಇಸ್ಲಾಂನ ಬೋಧನೆಯು ನಿಜವಾದ ಮುಸಲ್ಮಾನನ ಹೃದಯದಲ್ಲಿ ಇನ್ನೊಬ್ಬರ ಬಗ್ಗೆ ಎಂದಿಗೂ ದ್ವೇಷವನ್ನು ಉಂಟುಮಾಡುವುದಿಲ್ಲ. ಪ್ರಪಂಚದ ಭಗವಂತನ ಮಾತುಗಳು ಎಲ್ಲವನ್ನೂ ಒಳಗೊಂಡಿವೆ ಮತ್ತು ಇದು ಶಾಂತಿಯನ್ನು ಹರಡಲು ಬೃಹತ್ತಾದ ಮತ್ತು ವಿಶಾಲವಾದ ಮಾರ್ಗಗಳನ್ನು ತೆರೆಯುತ್ತದೆ. **ಅಲ್‌ಹಮ್ದು ಲಿಲ್ಲಹಿ**

***(ಪುಟ ಸಂಖ್ಯೆ-07ರಲ್ಲಿ ಮುಂದುವರಿಸಲಾಗಿದೆ)***

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.